ಸಂಪುಟ 01 | ಸಂಚಿಕೆ 219 | ಭಾನುವಾರ 05 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಗುರು ಪೂರ್ಣಿಮೆ (ವ್ಯಾಸ ಪೂರ್ಣಿಮೆ)
2026ರಲ್ಲಿ ಜುಲೈ 5 (ಭಾನುವಾರ) ರಂದು ಗುರು ಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಈ ದಿನವನ್ನು ಗುರುಗಳಿಗೆ, ಶಿಕ್ಷಕರಿಗೆ ಹಾಗೂ ಆಧ್ಯಾತ್ಮಿಕ ಮಾರ್ಗದರ್ಶಕರಿಗೆ ಗೌರವ ಸಲ್ಲಿಸುವ ದಿನವಾಗಿ ಆಚರಿಸಲಾಗುತ್ತದೆ. ಮಹರ್ಷಿ ವೇದವ್ಯಾಸ ಅವರ ಜನ್ಮದಿನವಾಗಿಯೂ ಇದನ್ನು ಸ್ಮರಿಸಲಾಗುತ್ತದೆ.

2) ರಾಷ್ಟ್ರೀಯ ಮೆಕ್ಯಾನಿಕಲ್ ಪೆನ್ಸಿಲ್ ದಿನ (National Mechanical Pencil Day)
ಮೆಕ್ಯಾನಿಕಲ್ ಪೆನ್ಸಿಲ್‌ನ ಆವಿಷ್ಕಾರ ಮತ್ತು ಬಳಕೆಯನ್ನು ನೆನಪಿಸುವ ಅನೌಪಚಾರಿಕ ಆಚರಣೆ.

3) ಅಂತರರಾಷ್ಟ್ರೀಯ ಬಿಕಿನಿ ದಿನ (International Bikini Day)
1946ರಲ್ಲಿ ಬಿಕಿನಿ ಉಡುಪಿನ ಪರಿಚಯವನ್ನು ಸ್ಮರಿಸುವ ಅನೌಪಚಾರಿಕ ಅಂತರರಾಷ್ಟ್ರೀಯ ದಿನ.

## ಸುಭಾಷಿತ

ಮನಸ್ಸು ಪರಿಶುದ್ಧವಾಗಿದ್ದರೆ, ಸಂತೋಷ ನೆರಳಿನಂತೆ ನಮ್ಮನ್ನ ಹಿಂಬಾಲಿಸುತ್ತದೆ.
–ಭಗವಾನ್ ಬುದ್ಧ

# ಇವಿಎಂ ಮುಕ್ತ ಚುನಾವಣೆ,

## ಮತಪಟ್ಟಿ ಪರಿಷ್ಕರಣೆ ರದ್ದತಿ ಕೋರಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋದ 'ಐಎನ್‌ಡಿಐಎ' : ಪತ್ರದಲ್ಲಿರುವುದೇನು?

❑ ನೈಜ್ಯ ದೇಸೆ ನ್ಯೂಸ್

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಆಡಳಿತದಲ್ಲಿ ದೇಶದ ಚುನಾವಣಾ ಪ್ರಜಾಪ್ರಭುತ್ವ ವ್ಯವಸ್ಥೆ ಗಂಭೀರ ಅಪಾಯಕ್ಕೆ ಸಿಲುಕಿದೆ ಎಂದು ಕಳವಳ ವ್ಯಕ್ತಪಡಿಸಿರುವ ಪ್ರತಿಪಕ್ಷಗಳ ಮೈತ್ರಿಕೂಟ 'ಐಎನ್‌ಡಿಐಎ', ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡಿರುವ ಕೇಂದ್ರ ಸರಕಾರವು ಗುಪ್ತ ಕಾರ್ಯಸೂಚಿ ಜಾರಿಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದೆ.

ಕೇಂದ್ರ ಚುನಾವಣಾ ಆಯೋಗ ಕೈಗೊಂಡಿರುವ ಮತಪಟ್ಟಿ ವಿಶೇಷ ಸಮಗ್ರ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕೂಡಲೇ ರದ್ದುಗೊಳಿಸಬೇಕು, ಚುನಾವಣಾ ಮತದಾನಕ್ಕೆ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಬದಲು ಮತಪತ್ರ ವ್ಯವಸ್ಥೆ ಮರುಸ್ಥಾಪಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಐಎನ್‌ಡಿಐಎ ಪತ್ರ ಬರೆದಿದೆ. ಕಾಂಗ್ರೆಸ್ ಸೇರಿದಂತೆ 'ಐಎನ್‌ಡಿಐಎ' ಮೈತ್ರಿಕೂಟದ 24 ಪಕ್ಷಗಳ ನಾಯಕರು



ಸಹಿ ಮಾಡಿದ ಪತ್ರವನ್ನು ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್ ಮೂಲಕ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್‌ಗೆ ಅವರಿಗೆ ಕಳುಹಿಸಲಾಗಿದೆ. "ಸಾಂವಿಧಾನಿಕ ಸಂಸ್ಥೆಗಳ ಮೇಲಿನ ದಬ್ಬಾಳಿಕೆ ಮುಂದುವರಿಸಲು ಅವಕಾಶ ನೀಡಿದರೆ ಭವಿಷ್ಯದಲ್ಲಿ ಚುನಾವಣಾ ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗಲಿದೆ. ಸರಕಾರದ ಕಾರ್ಯಸೂಚಿ ಜಾರಿಗೊಳಿಸಲು ಬಿಟ್ಟರೆ ಸಂಸದೀಯ ಪ್ರಜಾತಂತ್ರ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ," ಎಂದು ಪತ್ರದಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಹೊಸದಿಲ್ಲಿಯಲ್ಲಿ ಪತ್ರದ ಸಾರಾಂಶವನ್ನು ಮಾಧ್ಯಮಗಳಿಗೆ ಬಿಡುಗಡೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ. ಸಿ. ವೇಣುಗೋಪಾಲ್, "ಮೋದಿ–ಶಾ ಆಡಳಿತದಲ್ಲಿ ದೇಶದ ಚುನಾವಣಾ ಪ್ರಜಾಪ್ರಭುತ್ವ ವ್ಯವಸ್ಥೆ ಗಂಭೀರ ಅಪಾಯದಲ್ಲಿದೆ. ಸಾಂವಿಧಾನಿಕ ಸಂಸ್ಥೆಗಳಲ್ಲಿನಿಷ್ಪಕ್ಷಪಾತ ಹಾಗೂ ಪಾರದರ್ಶಕ ಆಡಳಿತ ರೂಪಿಸುವ ಹಿತದೃಷ್ಟಿಯಿಂದ ನ್ಯಾಯಾಲಯ ಮಧ್ಯಪ್ರವೇಶಿಸಬೇಕಿದೆ. ಚುನಾವಣಾ ಆಯೋಗವನ್ನು ಸರಿದಾರಿಗೆ ತರಲು ನ್ಯಾಯಾಂಗ ವ್ಯವಸ್ಥೆ ದೃಢ ಕ್ರಮ ಕೈಗೊಳ್ಳುವ ವಿಶ್ವಾಸವಿದೆ," ಎಂದು ಹೇಳಿದರು.

ಪ್ರತಿಪಕ್ಷಗಳ ಪತ್ರದಲ್ಲೇನಿದೆ? : "ಚುನಾವಣಾ ಆಯೋಗ ನಡೆಸುತ್ತಿರುವ ಏಕಪಕ್ಷೀಯ ಎಸ್‌ಐಆರ್ ಪ್ರಕ್ರಿಯೆ ಪ್ರಜಾತಂತ್ರ ವ್ಯವಸ್ಥೆಯ ದುರಂತಕ್ಕೆ ಕನ್ನಡಿಯಾಗಿದೆ. ಕೇಂದ್ರ ಚುನಾವಣಾ ಆಯೋಗದ ಪಕ್ಷಪಾತೀಯ ಧೋರಣೆಗೆ ಸಾಕ್ಷಿಯಾಗಿದೆ. ಮತಪಟ್ಟಿ, ಇವಿಎಂಗಳನ್ನು ತಿರುಚಲಾಗಿದೆ. ದಿಲ್ಲಿ, ಹರಿಯಾಣ, ಮಹಾರಾಷ್ಟ್ರ, ಪಶ್ಚಿಮ ಬಂಗಾಳದಲ್ಲಿದೊಡ್ಡ ಮಟ್ಟದಲ್ಲಿಅಕ್ರಮ ನಡೆಸಿರುವ ಸಾಧ್ಯತೆಗಳಿವೆ," ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

"ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಜನರ ಮತದಾನದ ಹಕ್ಕು ಕಸಿದುಕೊಳ್ಳಲಾಗಿದೆ. 2.40 ಲಕ್ಷ ಭದ್ರತಾ ಸಿಬ್ಬಂದಿ ನಿಯೋಜಿಸಿ ಚುನಾವಣೆ ನಡೆಸಲಾಗಿದೆ. ಬಿಜೆಪಿ ಪರವಾಗಿ ಕಾರ್ಯ ನಿರ್ವಹಿಸಿದ ಆಯೋಗದ ಕ್ರಮದಿಂದ ಹಲವು ರಾಜ್ಯಗಳಲ್ಲಿಬಿಜೆಪಿ ಅಧಿಕಾರಕ್ಕೆ ಬಂದಿದೆ," ಎಂದು ಪತ್ರದಲ್ಲಿಆರೋಪ ಮಾಡಲಾಗಿದೆ.

### ಪತ್ರದ ಮುಖ್ಯಾಂಶಗಳು

ಭವಿಷ್ಯದಲ್ಲಿಚುನಾವಣಾ ಸನಿಹದಲ್ಲಿಎಸ್‌ಐಆರ್ ಕೈಗೊಳ್ಳದಂತೆ ಆಯೋಗವನ್ನು ನಿಯಂತ್ರಿಸಬೇಕು
ಚುನಾವಣೆಯ ಐದು ವರ್ಷದ ಮೊದಲು ಎಸ್‌ಐಆರ್ ಪೂರ್ಣಗೊಳಿಸಲು ನಿರ್ದೇಶನ ನೀಡಬೇಕು
ಮುಂದಿನ ಚುನಾವಣೆಗಳನ್ನು ಇವಿಎಂ ಬದಲು ಬ್ಯಾಲೆಟ್ ಪೇಪರ್ ಮೂಲಕ ನಡೆಸಲು ಸೂಚಿಸಬೇಕು ಚುನಾವಣಾ ಪ್ರಕ್ರಿಯೆಯ ಸಮಗ್ರತೆ, ವಿಶ್ವಾಸಾರ್ಹತೆ ಮರುಸ್ಥಾಪಿಸಲು ನ್ಯಾಯಾಂಗ ಕ್ರಮ ವಹಿಸಬೇಕು

## KLU ನ 9ನೇ ಅಂತರ ಕಾಲೇಜು ಅಥ್ಲೆಟಿಕ್ ಮೀಟ್‌ನಲ್ಲಿ ಭಾರತಿಗೆ 6 ನೆಯ ಸ್ಥಾನ

❑ ನೈಜ್ಯ ದೇಸೆ ನ್ಯೂಸ್

ಸುರಪುರ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ವತಿಯಿಂದ ಆಯೋಜಿಸಲಾದ 2025?26ನೇ ಸಾಲಿನ 9ನೇ ಅಂತರ ಕಾಲೇಜು ಅಥ್ಲೆಟಿಕ್ ಮೀಟ್ನಲ್ಲಿ ಸುರಪುರದ ಅರುಂಧತಿ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿನಿ ಭಾರತಿ ಜಿ ಅವರು 5000 ಮೀಟರ್ ಓಟ ಸ್ಪರ್ಧೆಯಲ್ಲಿ 6ನೇ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.



ವಿದ್ಯಾರ್ಥಿನಿಯ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡುವಂತೆ ಶುಭ ಹಾರೈಸಿದ್ದಾರೆ."ಆಟ ನಮ್ಮ ಉತ್ಸಾಹ, ಗೆಲುವು ನಮ್ಮ ಅಭಿಮಾನ" ಎಂಬ ಧ್ಯೇಯದೊಂದಿಗೆ ಅರುಂಧತಿ ಕಾನೂನು ಮಹಾವಿದ್ಯಾಲಯವು ಕ್ರೀಡೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದು, ಈ ಸಾಧನೆ ಸಂಸ್ಥೆಯ ಹೆಮ್ಮೆಯನ್ನು ಮತ್ತಷ್ಟು ಹೆಚ್ಚಿಸಿದೆ.

## ಮುಟ್ಟಿದರೆ ಅರಿವಾಗದಿರುವ ಮಚ್ಚೆಗಳು ದೇಹದ ಮೇಲಿದ್ದರೆ ಒಮ್ಮೆ ವೈದ್ಯರ ಬಳಿ ಪರೀಕ್ಷಿಸಿ:

❑ ನೈಜ್ಯ ದೇಸೆ ನ್ಯೂಸ್

ಸಿರವಾರ: ದೇಹದ ಯಾವುದೆ ಭಾಗದಲ್ಲಿ ಮುಟ್ಟಿದರೆ ಅರಿವಾಗದಿರುವ, ಸ್ಪರ್ಶಜ್ಞಾನವಿಲ್ಲದ ಮಚ್ಚೆಗಳು ಇದ್ದರೆ ಒಮ್ಮೆ ವೈದ್ಯರ ಬಳಿ ತೋರಿಸಲು ಹೆಚ್ಚಿನ ಜಾಗೃತಿಯನ್ನು ನಾವೆಲ್ಲರೂ ನೀಡಬೇಕಿದೆ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀದೇವಿ ವಿಧ್ಯಾರ್ಥಿನಿಯರಿಗೆ ಮನವಿ ಮಾಡಿದರು.

ಸಿರಿವಾರ ಪಟ್ಟಣದ ಪಿಡಬ್ಲ್ಯುಡಿ ಕ್ಯಾಂಪ್‌ನಲ್ಲಿರುವ ಕಿಶೋರಿ ಕೇಂದ್ರದಲ್ಲಿ ಆರೋಗ್ಯ ಜಾಗೃತಿ ನೀಡಿ ಮಾತನಾಡುತ್ತಾ, ಸುಲಭವಾಗಿ ಗುಣವಾಗುವ ಕುಷ್ಠರೋಗವು ಶಾಪವಲ್ಲ, ಪಾಪವಲ್ಲ, ಇತರೆ ಖಾಯಿಲೆಗಳಂತೆ ಇದು ಒಂದಾಗಿದ್ದು, ಕುಷ್ಠರೋಗದಿಂದ ಗುಣಮುಖರಾಗಿ ಎಂದಿನಂತೆ ಅವರು ಸಹಜ ಜೀವನ ನಡೆಸುವುದರಿಂದ ಹಾಗೂ



ಇದು ನರ ಮತ್ತು ಚರ್ಮದ ಖಾಯಿಲೆಯಾಗಿದ್ದು, ಅನಗತ್ಯವಾಗಿ ತಪ್ಪುನಂಬಿಕೆ, ಮೂಡನಂಬಿಕೆಗಳಿಗೆ ಬಲಿಯಾಗದೆ ರೋಗ ಖಚಿತಪಟ್ಟಲ್ಲಿ ಉಚಿತ ಚಿಕತ್ಸೆ ಇದ್ದು, ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಉಚಿತ ಚಿಕಿತ್ಸೆಯನ್ನು ( ಕೇವಲ ಮಾತ್ರೆಗಳ ಸೇವನೆ )ಪಡೆದು ಗುಣಮುಖರಾಗಬಹುದೆಂದು ಜನತೆಗೆ ತಿಳಿಸಬೇಕಿದೆ ಎಂದರು.

ಐಸಿಡಿಎಸ್ ಮೇಲ್ವಿಚಾರಕಿ ನಿರ್ಮಲ ಮಾತನಾಡಿ, ಹೆಣ್ಣು ಮಕ್ಕಳ ಜೀವನದಲ್ಲಿ ಋತುಚಕ್ರವು ದೈಹಿಕ, ಮಾನಸಿಕ ಬದಲಾವಣೆಯೊಂದಿಗೆ ಮಾಸಿಕವಾಗಿ ಅಂಡಾಣು ಬಿಡುಗಡೆಯೊಂದಿಗೆ ಹದಿಹರೆಯ ಹಾಗೂ ವಿವಾಹ ನಂತರ ತಾಯ್ತನದ ಅವಕಾಶದ ಸಂಕೇತವಾಗಿದೆ. ಅದರ ಜೊತೆಗೆ ಪ್ರತಿ ಋತುಚಕ್ರದ ಅವಧಿಯಲ್ಲೂ ಶುಚಿತ್ವ ಕಾಪಾಡುವ ಕಾಳಜಿಯನ್ನು ಯಾವುದೇ ಮುಜುಗರ ಪಡದೆ ಕೈಗೊಳ್ಳಬೇಕು. ಪೌಷ್ಟಿಕಹಾರ ಸೇವಿಸಬೇಕು ಎಂದರು. ಈ ಸಂದರ್ಭದಲ್ಲಿ ಐಸಿಡಿಎಸ್ ಮೇಲ್ವಿಚಾರಕಿ ನಾಗರತ್ನ, ಸೇರಿದಂತೆ ಪಿಡಬ್ಲ್ಯುಡಿ ಕ್ಯಾಂಪ್ ಸರಕಾರಿ ಬಾಲಕಿಯರ ಪ್ರೌಢಶಾಲಾ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಯಾರು ಕಲಿಸಿದ ಪಾಠವನ್ನು ಹಸಿವು, ಬಡತನ ಕಲಿಸುತ್ತದೆ:ಮಂಜುನಾಥ ಭೋಗಾವತಿ

❑ ನೈಜ್ಯ ದೇಸೆ ನ್ಯೂಸ್

ಮಸ್ಕಿ:ಪಟ್ಟಣದಲ್ಲಿರುವ ಅಭಿನಂದನ್ ಸ್ಪೂರ್ತಿ ಧಾಮಕ್ಕೆ ಭೇಟಿ ನೀಡಿ ಇಲ್ಲಿನ ವಿಕಲಚೇತನ ಅನಾಥ ಹಾಗೂ ಬಡ ಮಕ್ಕಳೊಂದಿಗೆ ಮಂಜುನಾಥ ಭೋಗಾವತಿ ತಹಶಿಲ್ದಾರರು ದಾಸೋಹ ಸೇವೆ ಮಾಡಿಸುವ ಮೂಲಕ ಸರಳವಾಗಿ ಜನುಮ ದಿನವನ್ನು ಆಚರಿಸಿಕೊಂಡು,

ನಂತರ ಮಾತನಾಡಿ ನಾನು ಕೂಡ ಇಂತಹ ಬಡತನದಲ್ಲಿ ಬೆಳೆದಿದ್ದು ನನ್ನ ವಿದ್ಯಾಭ್ಯಾಸ ಚಿತ್ರದುರ್ಗದ ಮುರುಘ ರಾಜೇಂದ್ರ ಮಠದಲ್ಲಿ ಆಗಿದ್ದು, ಇಲ್ಲಿನ ಸಂಸ್ಕಾರ ತುಂಬಾ ಚೆನ್ನಾಗಿದ್ದು ಇದರ ಸದುಪಯೋಗವನ್ನು ಎಲ್ಲಾ ಮಕ್ಕಳು ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಿ, ಬಡತನ ಶಾಪವಲ್ಲ ಅದೊಂದು ವರದಾನ ಎಂದು ಮುನ್ನಡೆಸಿ ಎಂದು ಸ್ಪೂರ್ತಿ ಧಾಮದ ಮಕ್ಕಳಿಗೆ ತಿಳಿ ಹೇಳಿದರು.




ಅಭಿನಂದನ್ ಸಂಸ್ಥೆಯ ಉತ್ತಮ ಸೇವಾ ಕಾರ್ಯ ಸಂಸ್ಥೆಯಾಗಿದ್ದು ಈ ಸಂಸ್ಥೆಗೆ ಸರ್ಕಾರವು ಮುಂದಿನ ದಿನಗಳಲ್ಲಿ ಸಹಕಾರ ನೀಡುವಂತೆ ನಾವುಗಳು ಮನವಿ ಮಾಡುತ್ತೇವೆ ಎಂದರು. ಈ ಸಂದರ್ಭದಲ್ಲಿ ಉಪ ತಹಶಿಲ್ದಾರ ಸುನೀಲಕುಮಾರ,ಗ್ರಾಮಲೆಕ್ಕಾದಿಕಾರಿ ಮಹಾಂತೇಶ, ಅಭಿನಂದನ್ ಸಂಸ್ಥೆಯ ರಾಮಣ್ಣ ಹಂಪರಗುಂದಿ, ಹಾಗೂ ಸ್ಪೂರ್ತಿ ಧಾಮದ ಮಕ್ಕಳು ಉಪಸ್ಥಿತರಿದ್ದರು.

## ಮಸ್ಕಿ ಪುರಸಭೆ ಆಡಳಿತ ಮಂಡಳಿಯಿಂದ ಕುಡಿಯುವ ನೀರಿನ ಕೆರೆ ವಿಕ್ಷಣೆ

❑ ನೈಜ್ಯ ದೇಸೆ ನ್ಯೂಸ್

ಮಸ್ಕಿ: ಪಟ್ಟಣದ ತುಂಗಾಭದ್ರ ಎಡದಂಡೆ ನಾಲೆಯ ಪಕ್ಕದಲ್ಲಿರುವ ಶಾಶ್ವತ ಕುಡಿಯುವ ನೀರಿನ ಕೆರೆ ಪುರಸಭೆ ಅಧ್ಯಕ್ಷ ಸುರೇಶ ಹರಸೂರು ನೇತೃತ್ವದಲ್ಲಿ ಆಡಳಿತ ಮಂಡಳಿ ಸದಸ್ಯರು ಕೆರೆಯಲ್ಲಿರುವ ನೀರಿನ ಪ್ರಮಾಣವನ್ನು ವೀಕ್ಷಿಸಿದರು.

ನಂತರ ಪುರಸಭೆ ಅಧ್ಯಕ್ಷ ಸುರೇಶ ಹರಸೂರು ಮಾತನಾಡಿ, ಸದ್ಯ ಕೆರೆಯಲ್ಲಿ 3 ಅಡಿಗಳಷ್ಟು ನೀರಿನ ಲಭ್ಯತೆ ಇದ್ದು, 15 ದಿನಗಳವರೆಗೆ ನೀರಿನ ಸಮಸ್ಯೆಯಾಗುವುದಿಲ್ಲ. ಈಗಾಗಲೇ ಜಿಲ್ಲಾಧಿಕಾರಿಗಳು ಜುಲೈ 10 ರಿಂದ ಕುಡಿಯುವ ಸಲುವಾಗಿ ನಾಲೆಗೆ ನೀರು ಹರಿಸಲಾಗುತ್ತದೆ ಎಂದು ಹೇಳಿದ್ದಾರೆ. ಪುರಸಭೆ ವ್ಯಾಪ್ತಿಯ 23 ವಾರ್ಡುಗಳಲ್ಲಿ ಸುಮಾರು 88 ಬೋರ್‌ವೆಲ್‌ಗಳಿದ್ದು, ಬಳಕೆ ನೀರಿಗೆ ಯಾವುದೇ ತೊಂದರೆ ಇಲ್ಲ. ಕೆರೆಯ ನೀರನ್ನು 10 ದಿನಗಳಿಗೊಮ್ಮೆ ಬಿಡುತ್ತಿರುವದರಿಂದ ನೀರಿನ ಸಮಸ್ಯೆಯಾಗಿಲ್ಲ. ಕೆರೆಯಲ್ಲಿ ನೀರು ಖಾಲಿಯಾಗುವಷ್ಟರಲ್ಲಿ ನಾಲೆಗೆ ನೀರು ಹರಿಸಲಾಗುತ್ತದೆ ಎಂದು ಜಿಲ್ಲಾಡಳಿತದಿಂದ ಮಾಹಿತಿ ಇದೆ. ಪಟ್ಟಣದ ಜನತೆಗೆ ನೀರಿನ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತದೆ ಎಂದು ಪುರಸಭೆ ಅಧ್ಯಕ್ಷರು ತಿಳಿಸಿದರು.



ಈ ಸಂದರ್ಭದಲ್ಲಿ ಸ್ಥಾಮಿ ಸಮಿತಿ ಅಧ್ಯಕ್ಷ ಚೇತನ ಪಾಟೀಲ್, ವಿರೋಧ ಪಕ್ಷದ ನಾಯಕ ದೊಡ್ಡಕರಿಯಪ್ಪ, ಪುರಸಭೆ ಸದಸ್ಯರಾದ ರವಿಗೌಡ ಪಾಟೀಲ್, ಮಲ್ಲಿಕಾರ್ಜುನ ಬ್ಯಾಳಿ, ಭರತ್‌ಕುಮಾರು, ಪುರಸಭೆ ವ್ಯವಸ್ಥಾಪಕ ಸತ್ಯನಾರಾಯಣರಾವ್, ಶಿವರಾಜ ಮಾವಿನಭಾವಿ ಸೇರಿದಂತೆ ಪುರಸಭೆ ಸಿಬ್ಬಂದಿಗಳಿದ್ದರು.

# ಉಭಯ ನಾಯಕರಿಂದ 69 ಲಕ್ಷ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ"

❑ ನೈಜ್ಯ ದೇಸೆ ನ್ಯೂಸ್

ಸಿರಿವಾರ: ಗ್ರಾಮೀಣ ಪ್ರದೇಶಕ್ಕೆ ಸಿ ಸಿ ರಸ್ತೆ, ಚರಂಡಿ, ಕುಡಿಯುವ ನೀರು,ಶಾಲೆ ಕಟ್ಟಡ, ಆರೋಗ್ಯ ಕೇಂದ್ರದ ಕಟ್ಟಡ, ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚಿನ ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿ ಮಾಡುತ್ತದೆವೆ ಎಂದು ಮಾಜಿ ಸಚಿವರು ವಿಧಾನಪರಿಷತ್ ಸದಸ್ಯರಾದ ಎನ್.ಎಸ್.ಬೋಸರಾಜು ಹೇಳಿದರು.

ತಾಲೂಕಿನ ಅತ್ತನೂರು ಗ್ರಾಮದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ ಅವರೊಂದಿಗೆ ಶ್ರೀ ದಿಡ್ಡಿ ಬಸವೇಶ್ವರ ದೇವಸ್ಥಾನದಲ್ಲಿ ನೂತನ ಸಮುದಾಯ ಭವನ 2025–26ನೇ ಸಾಲಿನ 38.93 ಲಕ್ಷ ವೆಚ್ಚದಲ್ಲಿ ಕೆ.ಕೆ.ಆರ್.ಡಿ.ಬಿ.ಮೈಕ್ರೋ, 20 ಲಕ್ಷ ವೆಚ್ಚದಲ್ಲಿ ಶಾದಿಮಹಲ್ ನಿರ್ಮಾಣ.(2025–26ನೇ ಸಾಲಿನ ಅಒಖಯಾಯೋಜನೆ ಅನುಷ್ಠಾನ ಇಲಾಖೆ(ಕೆಆರ್



ಐಡಿಎಲ್), ಅಂಚಿನ ಮನೆ ಅಂಜಿನಯ್ಯ ಮನೆಯಿಂದ ಸಜ್ಜಲಗುಡ್ಡರಂಗಪ್ಪಮನೆಯವರೆಗೆ 10.00 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ.(2025–26ನೇ ಸಾಲಿನ ಪ್ರಗತಿ ಕಾಲೋನಿ, (ಅನುಷ್ಠಾನ ಇಲಾಖೆ) ಈ ಮೂರು ಕಾಮಗಾರಿಗೆ ಚಾಲನೆ ನೀಡಿದರು.

ನಂತರ ಶಾಸಕರಾದ ಜಿ.ಹಂಪಯ್ಯನಾಯಕ ಮಾತನಾಡಿ ಅತ್ತನೂರು ಗ್ರಾಮಸ್ಥರ ಬಹುದಿನದ ಬೇಡಿಕೆಯಾಗಿದ ಸಮುದಾಯ ಭವನಗಳ ನಿರ್ಮಾಣಕ್ಕೆ ಮಾಜಿ ಸಚಿವರಾದ ಬೋಸರಾಜು ಅವರ ಮಾರ್ಗದರ್ಶನದಲ್ಲಿ ನೀಡಲಾಗಿದೆ. ಗುತ್ತಿಗೆದಾರರು ಅವಧಿಯಲ್ಲಿ ಗುಣಮಟ್ಟದ ಕಾಮಗಾರಿಯನ್ನು ಮಾಡಿ ಮುಗಿಸಬೇಕು. ಮುಂದಿನ ದಿನಗಳಲ್ಲಿ ಇನೂ ಹೆಚ್ಚಿನ ಅನುದಾನ ನೀಡುವ ಮೂಲಕ ಅಭಿವೃದ್ಧಿ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಾನಿಧ್ಯವನ್ನು ಷ.ಬ್ರ, ಅಭಿನವ ರಾಚೋಟಿ ವೀರ ಶಿವಾಚಾರ್ಯ ಮಹಾಸ್ವಾಮಿಗಳು ಸೋಮವಾರ ಪೇಟೆ ಹಿರೇಮಠ ಅತ್ತನೂರು ವಹಿಸಿದ್ದರು. ಅರ್ಚಕರಾದ ವಿರೂಪಾಕ್ಷಯ್ಯ ಸ್ವಾಮಿ,ಬೂದಯ್ಯ ಸ್ವಾಮಿ,ಬಸವಲಿಂಗಯ್ಯ ಸ್ವಾಮಿ,ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಬ್ರಿಜೇಶ ಪಾಟೀಲ್, ಶರಣಯ್ಯ ನಾಯಕ ಗುಡದಿನ್ನಿ, ಬಸವರಾಜ ಪಾಟೀಲ್ ಅತ್ತನೂರು,ಶಿವಕುಮಾರ್ ಚುಕ್ಕಿ,ದಾನಗೌಡ, ಸಣ್ಣ ಈರಣ್ಣ ಪೋಸ್ಟ್, ಈರಪ್ಪ ನಾಯಕ. ಚನ್ನಪ್ಪ ಗಚ್ಚಿನಮನೆ, ಕೆ.ದುರಗಣ್ಣ ಒ.ಆ.ಗೌಸ್. ಚಂದ್ರು ನಾಯಕ, ದಿಡ್ಡಿಬಸವೇಶ್ವ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾದ ವೀರಭದ್ರಯ್ಯಸ್ವಾಮಿ, ಪ್ರಕಾ. ನವೀನ್ ಪಾಟೀಲ್,ಮಾರ್ಕಪ್ಪ, ಚನ್ನಪ್ಪ ನಾಗೋಲಿ, ಚನ್ನಪ್ಪಗಡ್ಡ, ಬೆಟ್ಟದ ಬಸವ, ಮಲ್ಲಿಕಾರ್ಜುನ ಗೌಡ ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು, ಅತ್ತನೂರು ಗ್ರಾಮಸ್ಥರು ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

### ಗುಬ್ಬಚ್ಚಿ

ಗುಬ್ಬಚ್ಚಿ ನಮ್ಮ ಮನೆಯ ಮುದ್ದಿನ
ಹಕ್ಕಿ,ಚಿಕ್ಕದಾದರೂ ತುಂಬಾ ಚುರುಕಿನ ಪಕ್ಷಿ.
ಕಂದು–ಬಿಳಿ ಬಣ್ಣದ ರೆಕ್ಕೆಗಳ
ಸೊಬಗು,ನೋಡಿದರೆ ಮನದಲ್ಲಿ ಮೂಡುತ್ತದೆ
ಹರುಷವು.

ಬೆಳಗಿನ ಜಾವ ಚಿಲಿಪಿಲಿ ಹಾಡು,
ಕೇಳಿದರೆ ದೂರವಾಗುತ್ತದೆ ಬೇಸರದ ಕಾಡು.
ಮನೆಯ ಸುತ್ತ ಗೂಡು ಕಟ್ಟುವುದು,ಮರಿಗಳಿಗೆ
ಪ್ರೀತಿಯಿಂದ ಆಹಾರ ತರುವುದು.

ಧಾನ್ಯ ಕಾಳುಗಳನ್ನು ಹುಡುಕಿ
ತಿನ್ನುವುದು,ಪ್ರಕೃತಿಯೊಂದಿಗೆ ಸಂತೋಷವಾಗಿ
ಬದುಕುವುದು.
ಮನುಷ್ಯರಿಗೆ ಹಾನಿ ಮಾಡದ ಸ್ನೇಹಿತೆ,ಪರಿಸರದ
ನಿಜವಾದ ರಕ್ಷಕಿ.

ಮರಗಳು ಕಡಿಮೆಯಾದಾಗ ಸಂಕಟ
ಎದುರಾಯಿತು,
ಗುಬ್ಬಚ್ಚಿಯ ಸಂಖ್ಯೆ ನಿಧಾನವಾಗಿ
ಇಳಿಯಿತು.ಮರಗಳನ್ನು ನೆಟ್ಟು ಅವಳನ್ನು
ಕಾಪಾಡೋಣ,ನೀರಿನ ಪಾತ್ರೆ ಇಟ್ಟು
ಪ್ರೀತಿಯಿಂದನೋಡೋಣ.

ಗುಬ್ಬಚ್ಚಿ ಉಳಿದರೆ ಪ್ರಕೃತಿ ನಗುವುದು,ನಮ್ಮ
ಬದುಕು ಇನ್ನಷ್ಟು ಸುಂದರವಾಗುವುದು.

ಅಮರೇಶ

## 2026–27ನೇ ಸಾಲಿನ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ ಪ್ರವೇಶಾತಿ ಅರ್ಜಿ ಆಹ್ವಾನ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ರಾಯಚೂರು ಜಿಲ್ಲೆ ಮಾನವಿ ತಾಲೂಕಿನ ಕುರ್ಡಿ ಗ್ರಾಮದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ 2026–27ನೇ ಶೈಕ್ಷಣಿಕ ವರ್ಷದ ಪ್ರವೇಶಾತಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿಗೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಬಾಲಕರು ಅರ್ಜಿ ಸಲ್ಲಿಸಬಹುದು.**

ಅರ್ಜಿ ಸಲ್ಲಿಸುವ ವಿಧಾನ ಆಸಕ್ತರು ಇಲಾಖೆಯ ಅಧಿಕೃತ ವೆಬ್‌ಸೈಟ್ ತಿತಿತಿ.ತಿಜ.ಇಚಿಡಿ.ಎಟಿ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15/07/2026 ಸಂಪರ್ಕಿಸುವ ವಿಳಾಸ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಕುರ್ಡಿ ತಾ. ಮಾನವಿ, ಜಿ. ರಾಯಚೂರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 8861400076, 9916947459 ಸಮಾಜ ಕಲ್ಯಾಣ ಇಲಾಖೆ ಮಾನವಿ

## ಜುಲೈ 06ರಂದು ವಿದ್ಯುತ್ ವ್ಯತ್ಯಯ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 01ರ ವ್ಯಾಪ್ತಿಗೆ ಬರುವ ಜೆ–5 ಹಾಗೂ ಜೆ–06 ಪೋಲಿಟೆಕ್ನಿಕ್ ಫೀಡರ್ ನಲ್ಲಿ ಗಿಡಗಳ ಕತ್ತರಿಸುವಿಕೆ ಪ್ರಯುಕ್ತ**




**ಜುಲೈ 06ರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ. ಅಂದು ಬೆಳಿಗ್ಗೆ 10ರಿಂದ ಹೊಸ ಎನ್‌ಜಿಓ ಕಾಲೋನಿ, ವಿದ್ಯಾ ನಗರ, ವಾಸವಿ ನಗರ, ಸಾವಿತ್ರಿ ಕಾಲೋನಿ, ಬಿಎಸ್‌ಎನ್‌ಎಲ್, ವಾಸವಿ ನಗರ, ಎಲ್‌ವಿಡಿ ಕಾಲೇಜ್, ಕಾದರಗುಂಡ, ಕೊತ್ತಪೇಟೆ, ತಿಮ್ಮಪೂರ ಪೇಟೆ, ಬಿಆರ್‌ಬಿ ಸರ್ಕಲ್, ಜೆಡಿ ತೋಟ, ಜಹಿರಬಾದ್, ಶಶಿಮಹಲ್ ವೃತ್ತ, ಮಂಗಳವಾರ ಪೇಟೆ, ಮೋಚಿವಾಡ, ನೇತಾಜಿ ನಗರ, ಬಂಗಾರ ಬಜಾರ್, ಹಳೆಯ ನೇತಾಜಿ ನಗರ ಪೋಲಿಸ್ ಸ್ಟೇಷನ್, ಪಟೇಲ್ ರೋಡ್, ಗೀತಾ ಮಂದಿರಾ ರೋಡ್, ಬೇಸ್ತವಾರ ಪೇಟೆ, ಮಡ್ಡಿಪೇಟೆ, ಏಗನೂರ್ ದೇವಸ್ಥಾನ, ಆರ್.ಡಿ.ಎ ಲೇಔಟ್, ನವೋದಯ ಸೆಂಟ್ರಲ್ ಸ್ಕೂಲ್, ಕೃಷ್ಣ ದೇವರಾಯ ಕಾಲೋನಿ, ಸುಚಿತ್ರ ಕಾಲೋನಿ, ಆಶೀರ್ವಾದ ಕಾಲೋನಿ, ನಂದಿ ಟೌನ್ ದೇವಸ್ಥಾನ, ಮಲ್ಲಿಕಾರ್ಜುನ ಲೇಔಟ್, ಶಂಕರ್ ಸಿಂಗ್ ಕಾಲೋನಿ, ನವೋದಯ ಇಂಜಿನಿಯರಿಂಗ್ ಕಾಲೇಜ್, ತಿರುಮಲ ಹಿಲ್ಸ್, ಕರ್ನಲ್ ಕೃಷ್ಣಮರ?ತಿ ಲೇಔಟ್, ಎ. ಎನ್,ಇಡೆಂಟಲ್ ಕಾಲೇಜ್, ಎನ್.ಸಿ.ಸಿ ಆಫೀಸ್, ಲಕ್ಮಣ ಲೇಔಟ್, ವಿಜಯ ಲಕ್ಷ್ಮೀ ಲೇಔಟ್, ಮಾನಿಕ ಪ್ರಭು ಲೇಔಟ್, ಅಮರ್ ಖೇಡ್ ಲೇಔಟ್, ಶಾಂತಿ ಪಾರಡೈಸ್ ಅಪರ?ಟ್ಮೆಂಟ್, ಮಾನಿಕ್ ನಗರ್ ಸರ್ಕಾರಿ ಪೋಲಿಟೆಕ್ನಿಕ್, ಐ,ಟಿ.ಐ ಕಾಲೇಜ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಉಪ ಲೋಕಾಯುಕ್ತರಿಗೆ ಅವಮಾನಿಸಿ ಇನ್ಸ್ಟಾ ಪೋಸ್ಟ್: ವೈದ್ಯರ ವಿರುದ್ಧ ಲೋಕಾಯುಕ್ತ ಸುಮೊಟೊ ಕೇಸ್!

❏ ನೈಜ್ಯ ದೆಸೆ ನ್ಯೂಸ್

**ಬೀದರ್: ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಿಗೆ ಅವಮಾನವಾಗುವ ರೀತಿಯಲ್ಲಿ ಸಾಮಾಜಿಕ ಜಾಲ ತಾಣದಲ್ಲಿ ಸಂದೇಶ ಹರಿಬಿಟ್ಟ ಇಬ್ಬರು ವೈದ್ಯರು ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸುವ ಮೂಲಕ ಲೋಕಾಯುಕ್ತರು ಬಿಸಿ ಮುಟ್ಟಿಸಿದ್ದಾರೆ.**

ವಿಜಯಪುರ ಜಿಲ್ಲೆಯ ಆದರ್ಶನಗರದ ನಿವಾಸಿ ಫಿಜಿಶಿಯನ್ ಹಾಗೂ ಮಧುಮೇಹ ತಜ್ಞ ಡಾ.ಅಮಿತ್ ಪುಂಡಲೀಕ ಕಾಳೆ ಹಾಗೂ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಕೌಠಾ (ಬಿ) ಗ್ರಾಮದ ಡಾ. ಸಿದ್ದು ಬಿನ್ ರಮೇಶ್ ದೇವರೆ ವಿರುದ್ಧ ಸ್ವಯಂ ಪ್ರೇರಿತ ಕೇಸ್ ದಾಖಲಾಗಿದೆ. ಜೂನ್ 20ರಂದು ಬೀದರ್ ನಗರದಲ್ಲಿರುವ ಬೀದರ್ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಹಾಗೂ ಸಿಬ್ಬಂದಿ ಭೇಟಿ ನೀಡಿ, ಅಲ್ಲಿನ ನ್ಯೂನತೆಗಳು ಹಾಗೂ ಅವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಕುರಿತು ವಿಡಿಯೋ ಜಾಲತಾಣದಲ್ಲಿ ಬಿತ್ತರವಾಗಿತ್ತು. ಈ ವಿಡಿಯೋದಲ್ಲಿ ಉಪ ಲೋಕಾಯುಕ್ತರ ಕಾರ್ಯವನ್ನು ಟೀಕಿಸಿ ಸಂದೇಶ ಹಾಕಿದ್ದರು.

"ನೀವು ಜವಾಬ್ದಾರಿಯುತ ವೈದ್ಯರು. ಭಾರತೀಯ ಪ್ರಜೆಯಾಗಿದ್ದೀರಿ. ಕರ್ನಾಟಕ ಲೋಕಾಯುಕ್ತ ಸಂಸ್ಥೆ ಹಾಗೂ ಸಾರ್ವಜನಿಕರ ಬಗ್ಗೆ ಯಾವುದೇ ಜವಾಬ್ದಾರಿ ಇಲ್ಲದೆ, ಸಾಮಾಜಿಕ ಜಾಲ ತಾಣದಲ್ಲಿ ಕಾಮೆಂಟ್ ಮಾಡಿರುತ್ತೀರಿ. ನೀವು ಹಾಕಿರುವ ಕಾಮೆಂಟ್ ಸಂಬಂಧಪಟ್ಟ ಅಧಿಕಾರಿಗಳ ನೈತಿಕತೆ ಕುಗ್ಗಿಸುವಂತಿದೆ. ಲೋಕಾಯುಕ್ತ ಸಂಸ್ಥೆಗೆ ಕೆಟ್ಟ ಹೆಸರು ತರುತ್ತಿದೆ. ನಿಮ್ಮ ಕೃತ್ಯವು ಲೋಕಾಯುಕ್ತ ಮತ್ತು ಅದರ ಅಧಿಕಾರಿಗಳು ತಮ್ಮ ಸಾಂಸ್ಥಿಕ ಜವಾಬ್ದಾರಿ ಮತ್ತು ಸಾಂವಿಧಾನಿಕ ಬಾಧ್ಯತೆಯನ್ನು ನಿರ್ವಹಿಸದಂತೆ ತಡೆಯುವಂತಿದೆ. ಹೀಗಾಗಿ, ನಿಮ್ಮ ಕಾಮೆಂಟ್ ಕರ್ನಾಟಕ ಲೋಕಾಯುಕ್ತ ಮತ್ತು ಅದರ ಅಧಿಕಾರಿಗಳಿಗೆ ಮಾಡಿದ ಅವಮಾನವಲ್ಲದೆ ಬೇರೇನೂ ಆಗಿರುವುದಿಲ್ಲ. ಹೀಗಾಗಿ, ನೀವು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 17ರ ನಿಬಂಧನೆಗಳ ಅಡಿಯಲ್ಲಿಶಿಕ್ಷೆಗೆ ಗುರಿಯಾಗಿರುತ್ತೀರಿ" ಎಂದು ದೂರಿನಲ್ಲಿ ತಿಳಿಸಲಾಗಿದೆ.

ಜೈಲು ಶಿಕ್ಷೆ, ದಂಡಕ್ಕೆ ಅರ್ಹ : ಸೆಕ್ಷನ್ 17ರಡಿ ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ತನಿಖೆ, ವಿಚಾರಣೆ ನಡೆಸುವಾಗ ಉದ್ದೇಶಪೂರ್ವಕವಾಗಿ ಅಪಮಾನ, ತಡೆಯನ್ನುಂಟು ಮಾಡುವ ಹಾಗೂ ಲೋಕಾಯುಕ್ತಕ್ಕೆ ಅಪಖ್ಯಾತಿ ತರಬೇಕು ಎಂದು ಅಥವಾ ಹೇಳಿಕೆ ನೀಡುವ,




ಪ್ರಕಟಿಸುವ ವ್ಯಕ್ತಿಯ ದೋಷಸಿದ್ಧವಾದ ನಂತರ, ಆರು ತಿಂಗಳುಗಳ ಅವಧಿಗೆ ಕಡಿಮೆಯಿಲ್ಲದ, ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಸಾದಾ ಕಾರಾಗೃಹವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವರೆಡರಿಂದಲೂ ದಂಡಿತನಾಗತಕ್ಕದ್ದು.

ಕಲಂ 132 ಅಡಿ ಸಾರ್ವಜನಿಕ ಸೇವಕನು ತನ್ನ ಕರ್ತವ್ಯವನ್ನು ನಿರ್ವಹಿಸದಂತೆ ತಡೆಯಲು ಹಲ್ಲೆಅಥವಾ ಕ್ರಿಮಿನಲ್ ಬಲಪ್ರಯೋಗ ಮಾಡುವ ವ್ಯಕ್ತಿಗೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿವರೆಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. ಜಾಮೀನು ರಹಿತ, ಯಾವುದೇ ಮ್ಯಾಜಿಸ್ಟ್ರೇಟ್ ವಿಚಾರಣೆ ಒಳಪಡಬಹುದು ಎಂದೂ ತಿಳಿಸಲಾಗಿದೆ.

ಕಲಂ 353(2) ಅಡಿ ಸುಳ್ಳು ಮಾಹಿತಿ, ವದಂತಿ ಅಥವಾ ಅಪಾಯದ ಭೀತಿಯನ್ನು ಹುಟ್ಟಿಸುವ ಸುದ್ದಿಯನ್ನೊಳಗೊಂಡ ಯಾವುದೇ ಹೇಳಿಕೆಯನ್ನು ಅಥವಾ ವರದಿಯನ್ನು, ವಿದ್ಯುನ್ಮಾನ ಸಾಧನ ಸೇರಿದಂತೆ ಬೇರೆ ಯಾವುದೇ ಸಾಧನಗಳ ಮೂಲಕ ಕೊಟ್ಟರೆ, ಪ್ರಕಟಿಸಿದರೆ, ಪ್ರಸಾರ ಮಾಡಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗಬೇಕಾಗುತ್ತದೆ.

ಇನ್ಸ್ಟಾ ಕಾಮೆಂಟ್‌ನಲ್ಲೇನಿತ್ತು : "ಲೋಕಾಯುಕ್ತ ಸದಸ್ಯರೇ ನಿಮ್ಮ ಶಿಸ್ತು, ವರ್ತನೆಯನ್ನು ಕರ್ನಾಟಕದ ಆರೋಗ್ಯ ಸಚಿವರ ಎದುರು ಪ್ರದರ್ಶಿಸಿ. "ಅವರ ಮುಂದೆ ಸುಮ್ಮನಿರುವ ನೀವು, ವೈದ್ಯರ ಮುಂದೆ ಮಾತ್ರ ಬೊಗಳುತ್ತೀರಿ "ಎಂಬರ್ಥದಲ್ಲಿ ಕೆಲ ಕಟುವಾದ ಶಬ್ದಗಳೊಂದಿಗೆ ಡಾ. ಅಮಿತ್ ಪುಂಡಲೀಕ ಕಾಳೆ ಎಂಬ ವೈದ್ಯ ಕಾಮೆಂಟ್ ಮಾಡಿದ್ದಾರೆ. ಮತ್ತೋರ್ವ ವೈದ್ಯ ಡಾ. ಸಿದ್ದು ಬಿನ್ ರಮೇಶ್ ದೇವರೆ ಎನ್ನುವವರು "ನಿಮಗೆ ಧೈರ್ಯವಿದ್ದರೆ ವಿಷಯವನ್ನು ಸ್ಥಳೀಯ ಶಾಸಕರಿಗೆ ಹೇಳಿ. ಉದ್ಯೋಗಿಗಳ ಮುಂದೆ ದರ್ಪ ತೋರಬೇಡಿ " ಎಂದು ಗುಡುಗಿದ್ದರು. ಈ ಹಿನ್ನೆಲೆಯಲ್ಲಿ ಇಬ್ಬರ ವಿರುದ್ಧವೂ ದೂರು ದಾಖಲಾಗಿದೆ.

## ಸೋಮಲಾಪುರದಲ್ಲಿ ಪ್ರಶಸ್ತಿ ವಿಜೇತ ಕಲಾವಿದೆಗೆ ಮತದಾರರ ಪರಿಷ್ಕರಣೆ ಅರ್ಜಿ ವಿತರಣೆ



❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲ್ಲೂಕಿನಲ್ಲಿ ಈಗಾಗಲೇ ಆರಂಭವಾಗಿರುವ ಮತದರಾರ ವಿಶೇಷ ಸಮಗ್ರ ಪರಿಷ್ಕರಣೆ ಅಭಿಯಾನ ಭರದಿಂದ ಸಾಗಿದ್ದು, ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಾಗೂ ಪಟ್ಟಣದಲ್ಲಿ ಗಣ್ಯರು, ರಾಜಕೀಯ ಪ್ರತಿನಿಧಿಗಳು ಹಾಗೂ ವಿಶೇಷವಾಗಿ ಪ್ರಶಸ್ತಿ ಪುರಸ್ಕೃತ ಕಲಾವಿದರಿಗೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಯ ಎನ್ಯುಮರೇಷನ್ ಅರ್ಜಿಗಳನ್ನು ವಿತರಿಸಿ ಮತದಾರರ ಪರಿಷ್ಕರಣೆ ಜಾಗೃತಿ ಮೂಡಿಸಿದರು.**

ತಾಲ್ಲೂಕಿನ ದೇವಲಾಪುರ ಗ್ರಾ.ಪಂ ವ್ಯಾಪ್ತಿಯ ಸೋಮಲಾಪುರ ಗ್ರಾಮದಲ್ಲಿ ವಾಸವಿರುವ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಬುರ್ರಕಥಾ ಕಲಾವಿದೆ ಅಶ್ವಪೆದ್ದ ರಾಮಕ್ಕ ಅವರ ಮನೆಗೆ ಗ್ರಾಮ ಪಂಚಾಯತಿ ಅಧಿಕಾರಿಗಳು ಸಿಬ್ಬಂದಿಗಳು ಭೇಟಿ ನೀಡಿ ಕಲಾವಿದೆಯನ್ನು ಆತ್ಮೀಯವಾಗಿ ಸನ್ಮಾನಿಸಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಅಭಿಯಾನ ಕುರಿತು ಮಾಹಿತಿ ನೀಡಿ ತಮ್ಮ ಗ್ರಾಮದಲ್ಲಿ ಮತದಾರರ ಪರಿಷ್ಕರಣೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ಮನವಿ ಮಾಡಿದರು.

ದೇವಲಾಪುರ ಗ್ರಾ.ಪಂ.ಪಿಡಿಓ ಮಲ್ಲಿಕಾರ್ಜುನ ಮಾತನಾಡಿ ಮತದಾರರು ಸುಳ್ಳು ಸುದ್ದಿಗಳಿಗೆ ಕಿವಿಗೊಡದೆ ಈಗಾಗಲೇ ತಾವು ಮತದಾನ ಮಾಡಿದ ದಾಖಲೆಗಳನ್ನು ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕು. ಒಂದು ತಿಂಗಳ ಕಾಲ ಈ ಅಭಿಯಾನ ನಡೆಯಲಿದ್ದು, ನಂತರ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಅದರಲ್ಲಿ ತಪ್ಪುಗಳಿದ್ದರೆ ಅಕ್ಷೇಪರಣೆಗಳನ್ನು ಸಲ್ಲಿಸಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತಿ ಸಿಬ್ಬಂದಿಗಳು ಗ್ರಾಮ ಪಂಚಾಯತಿ ಸಿಬ್ಬಂದಿಗಳು ಇದ್ದರು.

## ಧಾರ್ಮಿಕ ಸಮನ್ವಯತೆಯ ಹರಿಕಾರ ಸಂತ ಶಿಶುನಾಳ ಶರೀಫರು : ಎಚ್. ವೀರಪುರದ ಶ್ರೀ ಜಡೇಶ್ ತಾತ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಕಂಪ್ಲಿ ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಧಾರ್ಮಿಕ ಸಮನ್ವಯತೆಯ ಹರಿಕಾರ ಸಂತ ಶಿಶುನಾಳ ಶರೀಫರ ಪುಣ್ಯ ಸ್ಮರಣೋತ್ಸವನ್ನು ಸಂತ ಶಿಶುನಾಳ ಶರೀಫ ಸೇವಾ ಟ್ರಸ್ಟ್ ಎಮ್ಮಿಗನೂರು ವತಿಯಿಂದ ಶುಕ್ರವಾರ ಸಂಜೆ ತೇರು ಬೀದಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.**

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎಚ್ ವೀರಾಪುರದ ಜಡೇಶ್ ತಾತನವರು ಕರ್ನಾಟಕದ ಕಬೀರ ಎಂದೇ ಪ್ರಖ್ಯಾತರಾದ ಮಹಾನ್ ತತ್ವಜ್ಞಾನಿ ಮತ್ತು ಸೌಹಾರ್ದತೆಯ ಮೂರ್ತಿ ಸಂತ ಶ್ರೀ ಶಿಶುನಾಳ ಶರೀಫರ ಪುಣ್ಯಸ್ಮರಣೆಯನ್ನು ಸೇವಾ ಟ್ರಸ್ಟ್ ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯವಾಗಿದೆ ಶರೀಫರು ತಮ್ಮ ತತ್ವಪದಗಳ ಮೂಲಕ ಸಮಾಜದಲ್ಲಿದ್ದ ಮೂಢನಂಬಿಕೆ, ಜಾತಿ ಪದ್ಧತಿಯನ್ನು ಖಂಡಿಸಿ, ಮಾನವೀಯತೆ ಮತ್ತು ಕೋಮು ಸಾಮರಸ್ಯವನ್ನು ಜಗತ್ತಿಗೆ ಸಾರಿದರು. ಶರೀಫರ ಹಿಂದೂ ಗುರುಗಳಾದ ಶ್ರೀ ಗೋವಿಂದ



ಭಟ್ಟರ ಶಿಷ್ಯರಾಗಿ ಅಧ್ಯಾತ್ಮದ ಉನ್ನತ ಮಾರ್ಗವನ್ನು ತಲುಪಿದರು. ಇವರ ಗುರು–ಶಿಷ್ಯರ ಸಂಬಂಧವು ಇಂದಿಗೂ ಹಿಂದೂ–ಮುಸ್ಲಿಂ ಭಾವೈಕ್ಯತೆಗೆ ಅತ್ಯುತ್ತಮ ಉದಾಹರಣೆಯಾಗಿದೆ ಎಂದು ತಿಳಿಸಿದರು.

ಸೇವ ಟಸ್ಸಿನ ಸಾಧಕಲಿ ಸಾಬ್ ಮಾತನಾಡಿ, ಈಶ್ವರ, ಅಲ್ಲಾ, ನೀನೇ ಎಲ್ಲಾ' ಎಂದು ಬೋಧಿಸಿದವರು, ಆಚರಣೆಯಲ್ಲಿ ತಂದವರು ಹಾಗೂ ಸಾಧಿಸಿದವರು ಕಳಸದ ಗುರು ಗೋವಿಂದ ಭಟ್ಟರು ಹಾಗೂ ಅವರ ಶಿಷ್ಯರಾದ ಕರ್ನಾಟಕದ ಕಬೀರ ಸಂತ ಶಿಶುನಾಳ ಶರೀಫರು. ಮಂದಿರ–ಮಸೀದಿ, ಪುರಾಣ–ಕುರಾನ, ನಮನ–ನಮಾಜ್, ಅಲ್ಲಮ–ಅಲ್ಲಾ, ಜಂಗಮ–ಫಕೀರ, ಇವೆಲ್ಲಾ ಒಂದೇ, ಭಗವಂತನ ದರ್ಶನಕ್ಕೆ ನಾವು ಹಾಕಿಕೊಂಡ ವಿವಿಧ ಹಾದಿಗಳು ಎಂದು ತೋರಿಸಿದಂತಹ "ದಾರ್ಶನಿಕರು" ಕಳಸದ ಗುರು ಗೋವಿಂದ ಭಟ್ಟರು ಹಾಗೂ ಸಂತ ಶಿಶುನಾಳ ಶರೀಫರು.

ಹಿಂದೂ ಹಾಗೂ ಇಸ್ಲಾಂ ಧರ್ಮಗಳ ಸಮಾನತೆ, ಸಮನ್ವಯ ಹಾಗೂ ಸಮಭಾವನ್ನು, ಸಮಚಿತ್ತ ಹಾಗೂ ಸಮದೃಷ್ಟಿಯಿಂದ ನೋಡಿದ 'ಸಮಾನತೆಯ ಹರಿಕಾರರು' ಕಳಸದ ಗುರು ಗೋವಿಂದಭಟ್ಟರು ಹಾಗೂ ಸಂತ ಶಿಶುನಾಳ ಶರೀಫರು. ಇವರಿಬ್ಬರೂ ದೈವಭಕ್ತರು, ಆತ್ಮಜ್ಞಾನಿಗಳು, ತತ್ವಜ್ಞಾನಿಗಳು, ವಿಚಾರವಾದಿಗಳು, ವಿಮರ್ಶಕರು, ಶಾಂತಿ ಹಾಗೂ ಕ್ರಾಂತಿ ಪುರುಷರು, ಸಮಾಜ ಸುಧಾರಕರು, ನೀತಿ ಬೋಧಕರು ಹಾಗೂ ತ್ರಿಕಾಲ ಜ್ಞಾನಿಗಳು. ಎಲ್ಲಕ್ಕಿಂತ ಹೆಚ್ಚಾಗಿ ಇವರಿಬ್ಬರೂ ಸಮಸಮಾಜದ, ಮಾನವತೆಯ ಎರಡು ಕಣ್ಣುಗಳಾಗಿ 'ಮಹಾನ್ ಮಾನವತಾವಾದಿ'ಗಳಾಗಿ ಸಮಾಜಕ್ಕೆ ಬೆಳಕನ್ನು ಕೊಟ್ಟವರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ದಾಸರ ನಾರಾಯಣಪ್ಪ, ಸದಾಶಿವ ಧಣಿ, ಗಾದಲಿ ನಾಗರೆಡ್ಡಿ, ಸಮಾಜ ಸೇವಕ ನಾಯರ್ ಪೆಟ್ರೋಲ್ ಬಂಕ್ ನ ರಾಜು, ಕನಕಪ್ಪ ಸುಣಗಾರ, ಪ್ರಮುಖರಾದ ಟಿ. ರಾಮ, ತಾಯಪ್ಪ, ಪದ್ಮಾವತಮ್ಮ, ನಾರಾಯಣಪ್ಪ, ಪೀರವಲಿಸಾಬ್, ಸೇರಿದಂತೆ ಇತರರಿದ್ದರು. ಕಾರ್ಯಕ್ರಮ ನಿರೂಪಣೆ ಶಿಕ್ಷಕ ಎಸ್ ರಾಮಪ್ಪ ನಿರ್ವಹಿಸಿದರು.

## ಕೇಂದ್ರದಿಂದ ಮೆಟಾಗೆ ನೋಟಿಸ್ ಜಾರಿ

❏ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ದೇಶದಲ್ಲಿ ಮಕ್ಕಳ ಲೈಂಗಿಕ ಕಿರುಕುಳ ಉತ್ತೇಜಿಸುವ ಇನ್‌ಸ್ಟಾಗ್ರಾಮ್ ಜಾಹೀರಾತುಗಳ ಕುರಿತು ಮೆಟಾ ಸಂಸ್ಥೆಗೆ ಕೇಂದ್ರ ಸರ್ಕಾರ ಸಮನ್ಸ್ ಜಾರಿ ಮಾಡಿದೆ**

ಸುಮಾರು 30 ಜಾಹೀರಾತುಗಳು ಮಕ್ಕಳ ಲೈಂಗಿಕ ದೌರ್ಜನ್ಯದ ವಿಷಯ ಪ್ರಚಾರ ಮಾಡುತ್ತಿವೆ ಎನ್ನುವ ಮಾಹಿತಿ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಂಡಿದೆ. ದೇಶದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ವಿಷಯ ಉತ್ತೇಜಿಸುವ ಇನ್‌ಸ್ಟಾಗ್ರಾಮ್ ಜಾಹೀರಾತುಗಳ ಕುರಿತು ವಿವರಣೆ ನೀಡುವಂತೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು



ಮಾಹಿತಿ ತಂತ್ರಜ್ಞಾನ ಸಚಿವಾಲಯ ಸೂಚಿಸಿದೆ

"ಭಾರತದಲ್ಲಿ ಮಕ್ಕಳ ಲೈಂಗಿಕ ದೌರ್ಜನ್ಯದ ವಿಷಯ ಉತ್ತೇಜಿಸುವ ಇನ್‌ಸ್ಟಾಗ್ರಾಮ್ ಜಾಹೀರಾತುಗಳ ವಿಷಯದ ಬಗ್ಗೆ ಮೆಟಾ ಸಂಸ್ಥೆಯಿಂದ ವಿವರಣೆ ಪಡೆಯುವಂತೆ ಅಶ್ವಿನಿ ವೈಷ್ಣವ್ ಸೂಚನೆ ನಿರ್ದೇಶನ ನೀಡಿದ್ದಾರೆ ಮೆಟಾದ ಕಂಟೆಂಟ್ ಮಾಡರೇಶನ್ ಸಿಸ್ಟಮ್‌ಗಳ ಹೆಚ್ಚುತ್ತಿರುವ ಪರಿಶೀಲನೆಯ ನಡುವೆ ಸರ್ಕಾರದ ಈ ಕ್ರಮ ಬಂದಿದೆ.ಮಕ್ಕಳ ಲೈಂಗಿಕ ದೌರ್ಜನ್ಯದ ವಸ್ತುಗಳನ್ನು ಉತ್ತೇಜಿಸುವ ಸುಮಾರು 30 ವಿಶಿಷ್ಟ ಜಾಹೀರಾತುಗಳನ್ನು ಗಮನಿಸಿದೆ ಎಂದು ವರದಿ ಮಾಡಿದೆ, ಅದು ವೇದಿಕೆ ಮತ್ತು ಭಾರತೀಯ ಅಧಿಕಾರಿಗಳಿಗೆ ವರದಿ ಮಾಡಿದೆ.

"ಅತ್ಯಾಚಾರದ ವೀಡಿಯೊ" ಮತ್ತು "ಮಕ್ಕಳ ವೀಡಿಯೊ" ನಂತಹ ಪದಗುಚ್ಛ ಒಳಗೊಂಡಿರುವ ಜಾಹೀರಾತು ಪ್ರದರ್ಶಿಸುತ್ತದೆ, ಮಕ್ಕಳ ಲೈಂಗಿಕ ದೌರ್ಜನ್ಯದ ವಸ್ತುಗಳನ್ನು ಮಾರಾಟ ಮಾಡುವ ಟೆಲಿಗ್ರಾಮ್ ಚಾನೆಲ್‌ಗಳಿಗೆ ಬಳಕೆದಾರರನ್ನು ನಿರ್ದೇಶಿಸುತ್ತದೆ. ಸಂಶೋಧನೆ ಅನುಸರಿಸಿ, ಮೆಟಾ ಹಲವಾರು ಜಾಹೀರಾತು ತೆಗೆದುಹಾಕಿದೆ, ಬಹು ಖಾತೆಗಳನ್ನು ನಿಷ್ಕ್ರಿಯಗೊಳಿಸಿದೆ ಮತ್ತು ಅದರ ನೀತಿಗಳನ್ನು ಉಲ್ಲಂಘಿಸುತ್ತಿದೆ ಎಂದು ಹೇಳಲಾಗಿದೆ

ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ ವರದಿಯನ್ನು ಗಮನದಲ್ಲಿಟ್ಟುಕೊಂಡು ಪ್ರಕರಣವನ್ನು ಸೂಕ್ಷ್ಮವಾಗಿ ಗಮನಿಸುವುದಾಗಿ ಗಮನಿಸಲಾಗುತ್ತಿದೆ ಎಂದು ಹೇಳಲಾಗಿದೆ ಇನ್‌ಸ್ಟಾಗ್ರಾಮ್ ವೇದಿಕೆಯ ಮೂಲಕ ಮಕ್ಕಳ ದೌರ್ಜನ್ಯ ಉತ್ತೇಜಿಸುವ ಜಾಹೀರಾತು ಪ್ರದರ್ಶಿಸುತ್ತಿರುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಿದೆ, ಈ ಹಿನ್ನೆಲೆಯಲ್ಲಿ ಸೂಕ್ತ ವಿವರಣೆ ನೀಡುವಂತೆ ನಿರ್ದೇಶಿಸಿದೆ

## ಕಾರುಣ್ಯಾಶ್ರಮದಲ್ಲಿ ಆಯುಷ್ ಅರೋಗ್ಯ ತಪಾಸಣಾ ಶಿಬಿರ ಹಾಗೂ ಔಷಧಿಗಳ ವಿತರಣೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ರಾಯಚೂರು ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆಯುಷ್ ಇಲಾಖೆ ರಾಯಚೂರು ಸರ್ಕಾರಿ ಯುನಾನಿ ಚಿಕಿತ್ಸಾಲಯ ಸಿಂಧನೂರು ವತಿಯಿಂದ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಕೀಲು ಮೂಳೆ ವ್ಯಾಧಿಗಳು ಮತ್ತು ವಯೋಮಿತ್ರಕ್ಕೆ ಸಂಬಂಧಿಸಿದ ಆಯುಷ್ ಆರೋಗ್ಯತಪಾಸಣಾ ಶಿಬಿರದಲ್ಲಿ ಆಶ್ರಮದ ಆಶ್ರಯದಾತರುಗಳಾದ 65 ಜನ ವೃದ್ಧರು ಹಾಗೂ ವಯಸ್ಕರ ಬುದ್ಧಿಮಾಂದ್ಯರಿಗೆ ತಪಾಸಣೆ ನಡೆಸಿ ಔಷಧಿಗಳನ್ನು ವಿತರಿಸಿದರು.**




ಈ ಶಿಬಿರವನ್ನು ಸಿಂಧನೂರಿನ ಸರಕಾರಿ ಯುನಾನಿ ಚಿಕಿತ್ಸಾಲಯದ ವೈದ್ಯಾಧಿಕಾರಿಗಳಾದ ಡಾ. ಅಮ್ಜದ್ ಶರೀಫ್ ಮತ್ತು ಸಿಬ್ಬಂದಿಗಳಿಂದ ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಲಾಯಿತು. ಈ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ಅಮ್ಜದ್ ಶರೀಫ್ ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿದರು. ನಂತರ ಡಾ. ಅಮ್ಜದ್ ಶರೀಫ್ ಮಾತನಾಡಿ ಆಯುರ್ವೇದ ಯೋಗ ಹಾಗೂ ನ್ಯಾಚುರೋಪತಿ ಯುನಾನಿ ಸಿದ್ಧ ಹೋಮಿಯೋಪತಿ ಈ ಎಲ್ಲಾ ಭಾರತೀಯ ವೈದ್ಯ ಪದ್ಧತಿಗಳ ಸಮೂಹವೇ ಆಯುಷ್ ಈ ನಮ್ಮ ಇಲಾಖೆಯಿಂದ ಪ್ರತಿ ವರ್ಷ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ 2026 ನೇ ಸಾಲಿನಲ್ಲಿ ವಯೋಮಿತ್ರ ಅಂದರೆ 50 ವರ್ಷದ ಮೇಲ್ಪಟ್ಟಂತಹ ಜನರಲ್ಲಿ ವಯೋಸಹಜವಾಗಿ ಕಾಣಿಸಿಕೊಳ್ಳುವ ಕಾಯಿಲೆಗಳಾದ ಮಂಡಿ ನೋವು ಕೀಲು ನೋವು,

ಮೂಳೆ ವ್ಯಾಧಿ ಮತ್ತು ಅಧಿಕಾರದೊತ್ತಡ ಮತ್ತು ಮಧುಮೇಹ ಕಾಯಿಲೆಗಳಿಗೆ ಸೂಕ್ತವಾದಂತ ಸಲಹೆ ಸೂಚನೆಗಳನ್ನು ನೀಡಿ ಈ ವಯಸ್ಸಿನಲ್ಲಿ ಇಂತಹ ಕಾಯಿಲೆಗಳನ್ನು ತಡೆಗಟ್ಟಲು ಅನುಸರಿಸಬೇಕಾದಂತಹ ಆಹಾರ ಶೈಲಿ ಮತ್ತು ಜೀವನ ಶೈಲಿಯನ್ನು ಸವಿವರವಾಗಿ ತಿಳಿಸುವಂತಹ ವಿಶೇಷ ಇದಾಗಿದೆ. ವಯೋವೃದ್ಧರಿಗೆ ಕಂಡುಬರುವಂತಹ ಕಾಯಿಲೆಗಳನ್ನು ತಡೆಗಟ್ಟಲು ಹಾಗೂ ಬಂದಂತಹ ಕಾಯಿಲೆಗಳಿಂದ ಮುಕ್ಕರಾಗಲು ಸೂಕ್ತ ಯೋಗಾಸನಗಳ ಸೇವೆಯನ್ನು ಕೂಡ ಕಾರುಣ್ಯ ಆಶ್ರಮದೇ ವೃದ್ಧರಿಗೆ ಒದಗಿಸಲಾಗುವುದು. ನಮ್ಮ ಜಿಲ್ಲಾಡಳಿತ ಹಾಗೂ ಜಿಲ್ಲಾ ಇಲಾಖೆಯ ಸೂಚನೆಯಂತೆ ಕಾರುಣ್ಯ ಆಶ್ರಮದಲ್ಲಿ ಈ ಶಿಬಿರವನ್ನು ಹಮ್ಮಿಕೊಂಡಿದ್ದು ನಮ್ಮೆಲ್ಲರಿಗೂ ಕೂಡ ಆತ್ಮತೃಪ್ತಿ ತಂದಿದೆ.

ನಮ್ಮ ಇಲಾಖೆಯು ಕಾರುಣ್ಯ ಆಶ್ರಮದ ಸೇವೆಯ ಜೊತೆ ಸದಾ ಕಾಲ ನಿರಂತರವಾಗಿರುತ್ತದೆ. ಯಾವಾಗಲೂ ಸಹ ಕಾರುಣ್ಯ ಆಶ್ರಮದ ಆಶ್ರಯದಾತರುಗಳಿಗೆ ನಮ್ಮ ಇಲಾಖೆಯಿಂದ ಸೂಕ್ತ ಚಿಕಿತ್ಸೆ ನೀಡಲಾಗುವುದು. ಇಂತಹ ಪ್ರಾಮಾಣಿಕ ಸಂಸ್ಥೆಯು ನಮ್ಮ ಕಲ್ಯಾಣ ಕರ್ನಾಟಕದಲ್ಲಿ ನಿರಂತರ ಅನಾಥಪರ ಜನಪರ ವಿವಿಧ ಸಾಮಾಜಿಕ ಸೇವೆಯನ್ನು ಮಾಡುವ ಮೂಲಕ ಮಾದರಿಯಾಗಿದೆ. ನಾವುಗಳು ಸದಾ?ವಕಾಲ ಕಾರುಣ್ಯ ಸಂಸ್ಥೆಯ ಜೊತೆಗಿರುತ್ತೇವೆ ಎಂದು ಮಾತನಾಡಿದರು. ಈ ಶಿಬಿರದಲ್ಲಿ ಸಿಂಧನೂರಿನ ಸರಕಾರಿ ವಿನಾಯಕ್ ಚಿಕಿತ್ಸಾಲಯದ ಡಾ. ಅಯೀಷಾ ವೈಜ್ಞಾನಿಕಾರಿಗಳು ಹಾಗೂ ಶುಶ್ರುಕ ಅಧಿಕಾರಿಗಳಾದ ಲಿಂಗಮ್ಮ. ಫಾರ್ಮಸಿ ಅಧಿಕಾರಿಗಳಾದ ಭಾರ್ಗವ್. ಸಿಬ್ಬಂದಿಗಳಾದ ವಿಶ್ವನಾಥ ಖಲಂದರ್. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ. ಇವರುಗಳು ಮತ್ತು ಆಶ್ರಯದಾದರೂಗಳು ಉಪಸ್ಥಿತರಿದ್ದು ಈ ಶಿಬಿರದ ಉಪಯೋಗ ಪಡೆದುಕೊಂಡರು.

## ನೇಮಕಾತಿ ಪ್ರಕಟಣೆ

**NFSU ನೇಮಕಾತಿ 2026 ? 06 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 27, 2026 ಶಶಿ**

NFSU ನೇಮಕಾತಿ 2026: 06 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯವು ಜೂನ್ 2026 ರ NFSU ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಧಾರವಾಡ ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಜುಲೈ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: nfsu.ac.in

# ಜೆಸ್ಕಾಂ ಕಚೇರಿ ಕಟ್ಟಡ ಕಾಮಗಾರಿ ಅಂತು ಇಂತು ಆರಂಭ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪಟ್ಟಣದ ಜೆಸ್ಕಾಂ ಉಪವಿಭಾಗ ಎಇಇ ನೂತನ ಕಚೇರಿ ಆರಂಭಕ್ಕೆ ಅರಣ್ಯ ಇಲಾಖೆಯ ನಿಧಾನಗತಿಯಿಂದಾಗಿ ಕಟ್ಟಡ ನಿರ್ಮಾಣಕ್ಕೆ ಅಡಚಣೆಯಾಗಿತ್ತು. ಆದರೆ, ಇದೀಗ ಅರಣ್ಯ ಇಲಾಖೆ ಕಚೇರಿ ಕಟ್ಟಡ ನಿರ್ಮಾಣದ ಸ್ಥಳದಲ್ಲಿದ್ದ 10ಕ್ಕೂ ಅಧಿಕ ಗಿಡ ಮರಗಳನ್ನು ತೆರವುಗೊಳಿಸಲು ಅನುಮತಿ ನೀಡಿದ್ದು,**

ಹಾಗೂ ಅಲ್ಲಿನ ಗಿಡಮರಗಳನ್ನು ತೆರವುಗೊಳಿಸಿದ್ದರಿಂದ ಕಚೇರಿ ಕಟ್ಟಡ ನಿರ್ಮಾಣಕ್ಕಿದ್ದ ಗ್ರಹಣ ಬಿಟ್ಟಿದ್ದು, ಕಚೇರಿ ಕಟ್ಟಡ ನಿರ್ಮಾಣ ಕಾಮಗಾ–ರಿಯನ್ನು ಇಂದಿನಿಂದ ಆರಂಭಗೊಂಡಿದೆ. ದೇವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎನ್ನುವಂತೆ ಕಂಪ್ಲಿ ಕ್ಷೇತ್ರದ ಶಾಸಕರು ತಾಲ್ಲೂಕು ಕೇಂದ್ರದಲ್ಲಿ ಜೆಸ್ಕಾಂ ಇಲಾಖೆಯ ತಾಲ್ಲೂಕು ಮಟ್ಟದ ಕಚೇರಿ ಆರಂಭಕ್ಕೆ ಅನುದಾನ ಮಂಜೂರು ಮಾಡಿಸಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆಯನ್ನು ನೆರವೇರಿಸಿ ತಿಂಗಳುಗಳೇ



ಅಗಿದ್ದರು ಸಹಿತ ಸ್ಥಳದಲ್ಲಿದ್ದ ಗಿಡಮರಗಳನ್ನು ತೆರವುಗೊಳಿಸುವ ವಿಚಾರ ನೆನೆಗುದಿಗೆ ಬಿದ್ದಿತ್ತು. ಗಿಡಮರಗಳನ್ನು ತೆರವುಗೊಳಿಸಲು ಒಪ್ಪಿಗೆ ಸೂಚಿಸಲು ಅರಣ್ಯ ಇಲಾಖೆ ಮೀನಮೇಷ ಮಾಡಿದ್ದರಿಂದ ಕಚೇರಿ ಕಟ್ಟಡ ನಿರ್ಮಾಣ–ಕ್ಕೆ ಗ್ರಹಣ ಬಡಿದಿತ್ತು. ಇದರಿಂದಾಗಿ ಗುತ್ತಿಗೆದಾರರು ಆತಂಕ ಪಡುವಂತಾಗಿತ್ತು.

2024ಆ.9ರಂದು ಸ್ಥಳೀಯ ಜೆಸ್ಕಾಂ ಸಹಾಯಕ ಇಂಜಿನಿಯರ್(ವಿ) ಕಾರ್ಯಪಾಲನಾ ಶಾಖೆಯನ್ನು ಉಪವಿಭಾಗ (ಎಇಇ) ಕಚೇರಿಯನ್ನಾಗಿ ಉನ್ನತೀಕ–ರಿಸಲಾಗಿತ್ತು. ಆದರೆ, ಉನ್ನತೀಕರಣಗೊಂಡು ಎರಡು ವರ್ಷಗಳಾದರೂ ಎಇಇ ಕಚೇರಿಗೆ ಪ್ರತ್ಯೇಕ ಕಟ್ಟಡ ಇಲ್ಲದ ಕಾರಣ ಸಹಾಯಕ ಇಂಜಿನಿಯರ್ ಕಾರ್ಯಪಾಲನಾ ಕಚೇರಿ ಕಟ್ಟಡದಲ್ಲಿಯೇ ಕಾರ್ಯನಿರ್ವಹಿಸುತ್ತಿತ್ತು. ಕಂಪ್ಲಿ ಜೆಸ್ಕಾಂ ಇಲಾಖೆಗೆ ಪ್ರತ್ಯೇಕ ಎಇಇ ಕಚೇರಿಯ ಅಗತ್ಯತೆಯನ್ನು ಅರಿತ ಶಾಸಕರಾದ ಜೆ.ಎನ್. ಗಣೇಶ ಅವರು 2025–26ನೇ ಸಾಲಿನ ಜೆಸ್ಕಾಂ ಅನುದಾನದ ಯೋಜನೆಯಡಿಯಲ್ಲಿ 1.50.ಕೋಟಿ ರೂ ವೆಚ್ಚದಲ್ಲಿ ನಿರ್ಮಾಣಕ್ಕೆ 2026 ಏ.18ರಂದು ಭೂಮಿ ಪೂಜೆಯನ್ನು ನೆರವೇರಿಸಿದ್ದರು.

ಆದರೆ, ಅರಣ್ಯ ಇಲಾಖೆಯ ನಿಧಾನಗತಿಯಿಂದಾಗಿ ಕಚೇರಿ ನಿರ್ಮಾಣ ನೆನೆಗುದಿಗೆ ಬಿದ್ದಿತ್ತು. ಇತ್ತೀಚೆಗೆ ಪತ್ರಿಕೆಯಲ್ಲಿ ಎಇಇ ಕಚೇರಿ ಕಟ್ಟಡ ನಿರ್ಮಾಣಕ್ಕೆ ಗ್ರಹಣ ಎನ್ನುವ ವಿಸ್ಕೃತ ವರದಿಯನ್ನು ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಪತ್ರಿಕೆಯ ವರದಿ ಫಲಶೃತಿಯಿಂದಾಗಿ ಈಗ ಕಚೇರಿ ನಿರ್ಮಾಣಕ್ಕೆ ಜೆಸ್ಕಾಂ ಇಲಾಖೆ ಅಧಿಕಾ–ರಿಗಳು ಮತ್ತು ಗುತ್ತಿಗೆದಾರರು ಮಾರ್ಕಿಂಗ್ ಮಾಡುವ ಮೂಲಕ ಚಾಲನೆ ನೀಡಿದ್ದು, ಶೀಘ್ರದಲ್ಲಿ ಕಚೇರಿ ಕಟ್ಟಡ ನಿರ್ಮಾಣ ಮಾಡುವ ಭರವಸೆಯನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಜೆಸ್ಕಾಂ ಇಲಾಖೆಯ ಇಇ ಖಾಜ ಮೋಹಿದ್ದೀನ್, ಸಂತೋಷ್, ಕೆ.ಶ್ರೀನಿವಾಸಪ್ರಸಾದ್, ಗುತ್ತಿಗೆದಾರರು ಇದ್ದರು.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಂದ ಕ್ಷೇತ್ರ ಭೇಟಿ: ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದೆ ಇರುವ ಕಾರಣ ಬಿತ್ತಿದ ಬೆಳೆಗಳ ಪರಿಸ್ಥಿತಿಯನ್ನು ಅವಲೋಕಿಸಲು ರಾಯಚೂರು ತಾಲೂಕಿನ ಮಸ್ಸಪೂರು ಗ್ರಾಮದಲ್ಲಿ ಬಿತ್ತನೆ ಆಗಿರುವ ಹತ್ತಿ ಬೆಳೆಗಳನ್ನು ಆರ್ಥಿಕ ಇಲಾಖೆಯ ಸರಕಾರದ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಎಸ್. ನಕುಲ್ ಅವರು ಭೇಟಿ ಪರಿಶೀಲನೆ ಮಾಡಿದರು.**

ಪ್ರಸ್ತುತ ಮುಂಗಾರು ಹಂಗಾಮಿನ ಜೂನ್ ಮಾಹೆಯವರೆಗೆ ಜಿಲ್ಲೆಯಲ್ಲಿ ಶೇ.22 ರಷ್ಟು ಮಳೆ ಕೊರತೆ ಇದ್ದು, ಮಳೆಯ ಸಮಾನವಾಗಿ ಹಂಚಿಕೆ ಆಗದೆ ಇರುವ ಕಾರಣ ತೇವಾಂಶ ಕೊರತೆಯಿಂದ ಅಸಮರ್ಪಕವಾಗಿ ಮೊಳಕೆ ಒಡೆದಿರೂವುದಾಗಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ್ ಚೌಹಾಣ್ ಅವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮಾಹಿತಿ ನೀಡಿದರು. ಈ ಬಾರಿ ಹವಾಮಾನ ಮುನ್ಸೂಚನೆಯನ್ವಯ ಬರದ ಪರಿಸ್ಥಿತಿ ನಿರ್ಮಾಣವಾದ ಪಕ್ಷದಲ್ಲಿ ರೈತರಿಗೆ ಬೆಳೆ ವಿಮೆ ಯೋಜನೆ ಸಹಾಯ ಹಸ್ತವಾಗುತ್ತದೆ. ಆದ್ದರಿಂದ ರೈತರಲ್ಲಿ ಬೆಳೆ ವಿಮೆ ಯೋಜನೆ ಕುರಿತು ವ್ಯಾಪಕ ಪ್ರಚಾರ ಮಾಡುವ ಮೂಲಕ ರೈತರಿಗೆ ಅರಿವು ಮೂಡಿಸಬೇಕು ಎಂದು ಕೃಷಿ ಇಲಾಖೆ ಅಧಿಕಾ–ರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಮಹಾನಗರ ಪಾಲಿಕೆ ಆಯುಕ್ತ ಜೂಬಿನ್ ಮೋಹಪಾತ್ರ, ಉಪ ಕೃಷಿ ನಿರ್ದೇಶಕರು, ನಹೀಂ ಹುಸೇನ್, ರಾಯಚೂರು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕಿ ದೀಪಾ ಕುಲಕರ್ಣಿ ಸೇರಿದಂತೆ ಇತರರು ಇದ್ದರು.

# ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು: ಶಾಸಕ ಬಸನಗೌಡ ದದ್ದಲ್



❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಹಲವಾರು ಐತಿಹಾಸಿಕ ಸ್ಥಳಗಳು ಹಾಗೂ ಮೂರು ಮಹತ್ತರವಾದ ಐಲೆಂಡುಗಳು ಇವೆ. ಇಲ್ಲಿಗೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣ ಸೇರಿದಂತೆ ಇತರೆ ಹಲವಾರು ರಾಜ್ಯಗಳಿಂದ ಪ್ರವಾಸಿಗರು ಬರುತ್ತಿದ್ದು,**

ಅವುಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಹೇಳಿದರು ಅವರು ಶನಿವಾರ ವಿವಿಧ ಅಭಿವೃದ್ಧಿ ಕಾಮಗಾ–ರಿಗಳ ಪರಿಶೀಲನೆ ನಡೆಸಿದ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿ ಮಾತನಾಡಿದರು. ಇಂದು ನಾವು ಎಲ್ಲರೂ ಒಂದಾಗಿ ಸೇ–ರಿದ್ದೇವೆ. ನಿಮ್ಮನ್ನೆಲ್ಲ ಕೆಲವು ಪ್ರಮುಖ ಪ್ರವಾಸೋದ್ಯಮ ಸ್ಥಳಗಳಿಗೆ ಕರೆದುಕೊಂಡು ಹೋಗುವ ಉದ್ದೇಶದಿಂದ ಕರೆದಿದ್ದೆನೆ. ಕಳೆದ ಎಂಟು ವರ್ಷಗಳಿಂದ ನಾನು ಶಾಸಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈ ಅವಧಿಯಲ್ಲಿ ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿಯನ್ನು ನೀವು ಸ್ವತಃ ನೋಡಿ, ನಿಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕು ಎಂಬುದು ನಾನು ತಮಗೆಲ್ಲರಿಗೂ ಕರೆದ ಉದ್ದೇಶ ಆಗಿದೆ.

ನಮ್ಮ ಕ್ಷೇತ್ರದಲ್ಲಿ ಅತ್ಯಂತ ಪವಿತ್ರವಾದ ಹಾಗೂ ಅಪಾರ ಪ್ರವಾಸೋದ್ಯಮ ಸಾಮರ್ಥ್ಯ ಹೊಂದಿರುವ ಅನೇಕ ಸ್ಥಳಗಳಿವೆ. ವಿಶೇಷವಾಗಿ ಮೂರು ದ್ವೀಪಗಳು (ಐಲ್ಯಾಂಡ್‌ಗಳು) ನಮ್ಮ ಕ್ಷೇತ್ರದ ವಿಶಿಷ್ಟ ಆಕರ್ಷಣೆಗಳಾಗಿವೆ. ಇಂತಹ ಪ್ರಕೃತಿ ಮತ್ತು ಧಾರ್ಮಿಕ ವೈಶಿಷ್ಟ್ಯ ಹೊಂದಿರುವ ಸ್ಥಳಗಳು ಬೇರೆಡೆ ಇದ್ದಿದ್ದರೆ, ಆ ಭಾಗವು ಇಂದು ನೂರಾರು ಕೋಟಿ ರೂಪಾಯಿಗಳ ಪ್ರವಾಸೋದ್ಯಮ ಆದಾಯ ಗಳಿಸುತ್ತಿತ್ತು. ಕರಾವಳಿ ಭಾಗ ಹಾಗೂ ಮೈಸೂರು ಭಾಗದಲ್ಲಿ ಪ್ರವಾಸೋದ್ಯಮಕ್ಕೆ ನೀಡಿರುವ ಉತ್ತೇಜನವನ್ನು ನಾವು ನೋಡಿದ್ದೇವೆ. ನಮ್ಮ ಭಾಗದಲ್ಲಿಯೂ ಅದಕ್ಕಿಂತ ಕಡಿಮೆ ಅವಕಾಶಗಳಿಲ್ಲ. ಜೂರಾಲಾ ಅಣೆಕಟ್ಟು, ಕೃಷ್ಣಾ ನದಿಯ ನೀರಿನ ಸೌಂದರ್ಯ ಹಾಗೂ ಧಾರ್ಮಿಕ ಕ್ಷೇತ್ರಗಳು ಪ್ರವಾಸೋದ್ಯಮ ಅಭಿವೃದ್ಧಿಗೆ ಅತ್ಯುತ್ತಮ ಅವಕಾಶಗಳನ್ನು ಒದಗಿಸುತ್ತವೆ. ಆದ್ದ–ರಿಂದ ಈ ಭಾಗವನ್ನು ಪ್ರಮುಖ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಸರ್ಕಾರದ ಅನುದಾನ ಹಾಗೂ ವಿವಿಧ ಯೋಜನೆಗಳ ಮೂಲಕ ನಿರಂತರ ಪ್ರಯತ್ನ ಮಾಡುತ್ತಿದ್ದೇನೆ.

ಕೇಂದ್ರ ಸರ್ಕಾರದ ಪ್ರಸಾದ್ (PRASAD) ಯೋಜನೆ ಅಡಿಯಲ್ಲಿ ಪ್ರಮುಖ ಧಾರ್ಮಿಕ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಅವಕಾಶವಿದೆ. ಈ ಯೋಜನೆಯಡಿ ಪಾರ್ಕಿಂಗ್ ವ್ಯವಸ್ಥೆ, ಶೌಚಾಲಯಗಳು, ಕುಡಿಯುವ ನೀರು, ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳು, ರಸ್ತೆ ಅಭಿವೃದ್ಧಿ, ಪಾದಚಾರಿ ಮಾರ್ಗಗಳು ಹಾಗೂ ಇತರೆ ಅಗತ್ಯ ಸೌಕರ್ಯಗಳನ್ನು ನಿರ್ಮಿಸಲು ಅವಕಾಶ ದೊರೆಯುತ್ತದೆ. ನಮ್ಮ ಕ್ಷೇತ್ರದ ಪವಿತ್ರ ಕ್ಷೇತ್ರಗಳ ಅಭಿವೃದ್ಧಿಗಾಗಿ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳು ಹಾಗೂ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

## ಸದ್ಯಕ್ಕಿಲ್ಲ ಕೇಂದ್ರ ಸಂಪುಟ ಪುನಾರಚನೆ

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಇದೇ ತಿಂಗಳ 21 ರಿಂದ ಆಗಸ್ಟ್ 21 ರ ವರೆಗೆ ನಡೆಯಲಿರುವ ಮಳೆಗಾಲದ ಸಂಸತ್ ಅಧಿವೇಶನದವರೆಗೂ ಕೇಂದ್ರ ಸಂಪುಟ ಪುನಾರಚನೆಯಾಗುವ ಸಾಧ್ಯತೆಗಳಿಲ್ಲ.**



ಆಗಷ್ಟ ಅಂತ್ಯದ ವರೆಗೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರದಲ್ಲಿ ಸಂಪುಟ ಪುನಾರಚನೆ ಅಸಾಧ್ಯ ಎಂದು ಉನ್ನತ ಮೂಲಗಳನ್ನಾಧರಿಸಿ ಮಾಧ್ಯಮಗಳು ವರದಿ ಮಾಡಿವೆ. ಸಂಪುಟ ಪುನಾರಚನೆ ಸೇರಿದಂತೆ ಯಾವುದೇ ಕೆಲಸಗಳಿದ್ದರೂ, ಅದು ಅಧಿವೇಶನ ಮುಗಿದ ನಂತರ ಕೈಗೊಳ್ಳಲು ಪಕ್ಷ ನಿರ್ಧ–ರಿಸಿದೆ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ. ಮುಂದಿನವಾರದಲ್ಲಿ ಪ್ರಧಾನಿ ಮೋದಿ ಒಂದು ವಾರಗಳ ಕಾಲ ವಿದೇಶಿ ಪ್ರವಾಸಕ್ಕೆ ತೆರಳುತ್ತಿದ್ದಾರೆ. ಇದಾದ ಒಂದು ವಾರದ ಬಳಿಕ (ಜುಲೈ 20 ರಿಂದ) ಸಂಸತ್ತಿನ ಮಳೆಗಾಲದ ಅಧಿವೇಶನ ಶುರುವಾಗಲಿದೆ. ಹಾಗಾಗಿ ಸದ್ಯಕ್ಕೆ ಸರ್ಕಾರದ ಆದ್ಯತೆ ಈ ಅಧಿವೇಶನದಲ್ಲಿ ಕೆಲ ನಿರ್ಣಾಯಕ ಶಾಸನಗಳನ್ನ ಮಂಡಿಸುವುದಾಗಿದೆ. ಆದ್ದರಿಂದ ಮಳೆಗಾಲದ ಅಧಿವೇಶನ ಮುಗಿದ ಬಳಿಕ, ಕೆಲದಿನಗಳ ಕಾಲ ಸಮಯ ತೆಗೆದುಕೊಂಡು ಸಂಪುಟ ಪುನಾರಚನೆ ಮಾಡಲಾಗುತ್ತದೆ ಎಂದು ವರದಿಗಳು ತಿಳಿಸಿವೆ.

## ಹೆಚ್‌ಐವಿ ಮುಕ್ತ ಭಾರತ–2030ರ ಗುರಿಗೆ ಎಲ್ಲಾ ಇಲಾಖೆಗಳ ಸಮನ್ವಯ ಅಗತ್ಯ: ಡಾ.ಗಿರಿಜಾ ತಾಯಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ಸಮಾಜದಲ್ಲಿ ಕಳಂಕ ತಾರತಮ್ಯವನ್ನು ಉಂಟು ಮಾಡುವ ಹಾಗೂ ಇತ್ತೀಚಿನ ದಿನಗಳಲ್ಲಿ ಹದಿಹರೆಯದವರಲ್ಲಿ ಹೆಚ್ಚುತ್ತಿರುವ ಪ್ರಕರಣಗಳ ನಿಯಂತ್ರಣಕ್ಕಾಗಿ ಜಾಗೃತಿ ಕೈಗೊಳ್ಳಲು ಹಾಗೂ ಹೆಚ್‌ಐವಿ ಮುಕ್ತ ಭಾರತ ಎಂಬ ರಾಷ್ಟ್ರೀಯ ಗುರಿಯನ್ನು 2030ರ ಒಳಗೆ ತಲುಪಲು ಕೇವಲ ಆರೋಗ್ಯ ಇಲಾಖೆಯಿಂದ ಮಾತ್ರ ಸಾಧ್ಯವಿಲ್ಲ.**

ಸರ್ಕಾರದ ಎಲ್ಲಾ ಇಲಾಖೆಗಳು ಸಮನ್ವಯದೊಂದಿಗೆ ಜಂಟಿ ಹೋರಾಟ ರೂಪಿಸಬೇಕಾಗಿದೆ ಎಂದು ಬೆಂಗಳೂ–ರಿನ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆಯ ಮೂಲಸೌಕರ್ಯವಿಭಾಗದ ಜಂಟಿ ನಿರ್ದೇಶಕರಾದ ಡಾ.ಗಿರಿಜಾ ತಾಯಿ ಅವರು ಹೇಳಿದರು. ಬೆಂಗಳೂರಿನ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆಯ ನಿರ್ದೇಶನದಂತೆ ರಾಯಚೂರು ಜಿಲ್ಲೆಯಲ್ಲಿ ಹೆಚ್‌ಐವಿ ಕಾರ್ಯ ಚಟುವಟಿಕೆಗಳ ಪರಿಶೀಲನೆಗಾಗಿ ರಾಜ್ಯ ತಂಡದೊಂದಿಗೆ ಜಿಲ್ಲೆಗೆ ಆಗಮಿಸಿ, ರೀಮ್ಸ್ ಬೋಧಕ ಆಸ್ಪತ್ರೆ, ಪಿಹೆಚ್‌ಸಿ



ಗುಂಜಳ್ಳಿ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಜಿಲ್ಲಾ ಔಷಧಿ ಉಗ್ರಾಣ, ಹೆಚ್‌ಐವಿ ಅಪಾಯದ ಅಂಚಿನಲ್ಲಿರುವ ಜನತೆಗೆ ಮಧ್ಯಸ್ಥಿಕೆವಹಿಸಿ ಜಾಗೃತಿ ನೀಡುತ್ತಿರುವ ಹೊಸಬೆಳಕು ಸಂಸ್ಥೆ, ಎಆರ್ಟಿ, ಡಿಎಸ್‌ಆರ್‌ಸಿ, ಐಸಿಟಿಸಿ ಕೇಂದ್ರಗಳಿಗೆ ಬೇಟಿ ನೀಡಿ, ಮಾತನಾಡಿದರು.

ರಾಜ್ಯಾದ್ಯಂತ ಪ್ರತಿ ಜಿಲ್ಲೆಗೂ ತಂಡ ಬೇಟಿ ನೀಡುತ್ತಿದ್ದು, ನಾವೆಲ್ಲರೂ ಹೆಚ್‌ಐವಿ ಹರಡುವ ನಾಲ್ಕು ಮಾರ್ಗಗಳ ಕುರಿತು ಜನತೆಗೆ ಅರಿವು ಮೂಡಿಸುವ, ಹದಿಹರೆಯದವರ ಆರೋಗ್ಯ ಕಾಪಾಡುವ ಹೊಣೆಗಾ–ರಿಕೆ ನಮ್ಮ ಮೇಲಿದೆ ಎಂದು ತಿಳಿಸಿದರಲ್ಲದೆ, ಹೆಚ್ಚುತ್ತಿರುವ ಹೆಚ್‌ಐವಿ ಸೋಂಕಿತರ ಸಂಖ್ಯೆ ತಡೆಗಟ್ಟಲು, ಅದರಲ್ಲೂ ಯುವಜನತೆಯು ಬಲಿಯಾಗುವುದನ್ನು ನಿಯಂತ್ರಿಸಲು ಆರೋಗ್ಯ ಇಲಾಖೆಯೊಂದಿಗೆ ವಿವಿಧ ಮುಂಚೂಣಿ ಇಲಾಖೆಗಳು ಸಮಾನತೆಯಿಂದ ಕೆಲಸ ಮಾಡಬೇಕಿದೆ. ಇದಕ್ಕಾಗಿ ಕೆಸೆಪ್ಸ್ ಅಡಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸೇವಾ ಕೇಂದ್ರಗಳು ಸಮರ್ಪಕವಾಗಿ ಕೆಲಸ ನಿರ್ವಹಣೆಗೆ ತರಬೇತಿ, ಪರೀಕ್ಷೆ, ಜಾಗೃತಿ ನೀಡಲು ಸೂಚಿಸಿದರು.

ಮೊಬಲೈಜೇಷನ್ ಏಡ್ಸ್ ಸುರಕ್ಷಾ ಅಭಿಯಾನ ಭಾರತ ಸರಕಾರದ ಮಾರ್ಗಸೂಚಿಯಂತೆ ಮೊಬಲೈಜೇಷನ್ ಏಡ್ಸ್ ಸುರಕ್ಷಾ ಅಭಿಯಾನದ 95, 95, 99ರ ಗುರಿಯ ರಾಷ್ಟ್ರೀಯ ಮಾನದಂಡದಡಿ ಅಪಾಯಕಾರಿ ಇರುವ ಪ್ರದೇಶಗಳಲ್ಲಿ, ಹಾಗೂ ಪದವಿ ಕಾಲೇಜುಗಳಲ್ಲಿ ರೆಡ್ರಿಬ್ಬನ್ ಕ್ಲಬ್ ಮೂಲಕ ಹೆಚ್‌ಐವಿ ಏಡ್ಸ್ ಕುರಿತು ಅರಿವು, ಕ್ಯೂಆರ್ ಕೊಡ್ ಬಳಸಿ ಸ್ವಯಂ ಮೌಲ್ಯಮಾಪನ ಕೈಗೊಳ್ಳಲು ಹೆಚ್ಚಿನ ಜಾಗೃತಿ ನೀಡಲು ತಿಳಿಸಿದರು. ಇದೇ ಸಂದರ್ಭದಲ್ಲಿ ಹಣಕಾಸು ಜಂಟಿ ನಿರ್ದೇಶಕಿ ಲಲಿತಾ, ಮೂಲಸೌಕರ್ಯ ಉಪ ನಿರ್ದೇಶಕ ಡಾ ಹನುಮಂತರಾಯಪ್ಪ, ಸಹಾಯಕ ನಿರ್ದೇಶಕರು ಟಿಐ ಜ್ಯೋತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿ ಡಾ.ಮಹಮ್ಮದ್ ಶಾಕೀರ್, ಜಿಲ್ಲಾ ಏಡ್ಸ್ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಸೇರಿದಂತೆ ಡ್ಯಾಪ್ಕೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಗ್ರಾಮೀಣ ಭಾಗದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಜುಲೈ 04ರ ಶನಿವಾರ ದಂದು ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯಲ್ಲಿ ಮಿಂಚಿನ ಸಂಚಾರ ಆರಂಭಿಸಿ, ವಿವಿಧ ಅಭಿವೃದ್ಧಿ ಕಾಮಗಾ–ರಿಗಳನ್ನು ವೀಕ್ಷಣೆ ಮಾಡಿ, ಪರಿಶೀಲನೆ ಮಾಡಿದರು.**

ಬೆಳಿಗ್ಗೆ 09ಗಂಟೆಗೆ ರಾಯಚೂರು ನಗರದ ಮಂತ್ರಾಲಯ ರಸ್ತೆಯ ಶಾಸಕರ ಕಾರ್ಯಾಲಯದಿಂದ ಹೊರಟ ಶಾಸಕರು ನೇರವಾಗಿ ಚಂದ್ರ ಬಂಡ ಜಿಲ್ಲಾ ಪಂಚಾಯತ ವ್ಯಾಪ್ತಿಯ ಕಡಗಂದೊಡ್ಡಿ ಗ್ರಾಮದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನೂತನ ಬಸ್ ಅನ್ನು ಉದ್ಘಾಟನೆ ಮಾಡಿದರು. ನಂತರ ಮಾತನಾಡಿ, ವಿದ್ಯಾರ್ಥಿಗಳು ಬಸ್ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಅಲ್ಲದೆ ವಿದ್ಯಾರ್ಥಿಗಳು ಚೆನ್ನಾಗಿ ಓದಿ, ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆಯಬೇಕು. ತಂದೆ ತಾಯಿಗೆ ಒಳ್ಳೆಯ ಹೆಸರು ತರುವಂತೆ ಸಾಧನೆ ಮಾಡಬೇಕು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ನಂತರ ಚಂದ್ರಬಂಡದ ಡಿ.ದೇವರಾಜ ಅರಸು ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ ಭೇಟಿ ನೀಡಿ, ವಸತಿ ನಿಲಯದ ಸೌಲಭ್ಯವನ್ನು ಪರಿಶೀಲನೆ ಮಾಡಿ, ನಿಲಯದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ವಸತಿ ನಿಲಯದ ಊಟ ಉಪಚಾರದ ಕುರಿತು ಮಾಹಿತಿ



ಪಡೆದರು. ವಿದ್ಯಾರ್ಥಿಗಳಿಗೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಕೂಡಲೇ ಒದಗಿಸಬೇಕು ಎಂದರು. ನಂತರ ಅಡುಗೆ ಕೊಠಡಿಗೆ ಭೇಟಿ ನೀಡಿ, ತರಕಾರಿ, ರೇಷನಗಳನ್ನು ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರವನ್ನು ನೀಡಬೇಕು. ಮೆನು ಚಾರ್ಟ್ ಪ್ರಕಾರ ವಿವಿಧ ಆಹಾರವನ್ನು ಮಾಡಬೇಕು ಎಂದರು. ನಂತರ ವಸತಿ ನಿಲಯದ ಶುದ್ಧ ಕುಡಿಯುವ ನೀರಿನ ಘಟಕವನ್ನು ಪರಿಶೀಲಿಸಿದರು.

ನಂತರ ಅಕ್ಷರ ಪಾತ್ರ ಕೊಠಡಿಗೆ ಭೇಟಿ ನೀಡಿ, ವಿವಿಧ ಪುಸ್ತಕಗಳನ್ನು ವೀಕ್ಷಣೆ ಮಾಡಿ, ವಿದ್ಯಾರ್ಥಿಗಳಿಗೆ ಬೇಕಾಗುವ ಪುಸ್ತಕಗಳನ್ನು ಪೂರೈಕೆ ಮಾಡಬೇಕು ಎಂದರು. ಚಂದ್ರಬಂಡರಲ್ಲಿ ನೂತನ ರೈತರ ಸಂಪರ್ಕ ಕೇಂದ್ರ ಸ್ಥಾಪಿಸಲು ಜಾಗ ಗುರುತಿಸಲಾಗಿದೆ. ಕೃಷಿ ಇಲಾಖೆಯ ಅಧಿಕಾರಿಗಳು ಜಾಗವನ್ನು ಸರ್ವೆ ಮಾಡಿದ ನಂತರ ನೂತನ ರೈತ ಸಂಪರ್ಕ ಕೇಂದ್ರದ ಕಟ್ಟಡಕ್ಕೆ ಭೂಮಿ ಪೂಜಾ ನೆರವೇರಿಸಲಾಗುತ್ತದೆ ಎಂದರು.

ರಾಯಚೂರಿನ ಚಂದ್ರಬಂಡ ವ್ಯಾಪ್ತಿಯಲ್ಲಿ ಸುಮಾರು ಕಟ್ಟಲಪೂರ ಕ್ರಾಸ್ ನಿಂದ ತೆಲಂಗಾಣದ ಬೌಂಡರಿಬರಿಗೂ ಸುಮಾರು 30 ಕಿ.ಮೀ ರಸ್ತೆ ನಿರ್ಮಾಣ–ಕ್ಕಾಗಿ 14 ಕೋಟಿ ರೂ.ವೆಚ್ಚದಲ್ಲಿ ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣ ಮಾಡಲಾಗಿದೆ ಎಂದು ಗ್ರಾಮೀಣ ಕ್ಷೇತ್ರದ ಶಾಸಕರು ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು. ನಂತರ ಡಿ.ರಾಂಪೂರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕೃಷ್ಣ ನದಿ ಬ್ರಿಜ್ ಕಾಮಗಾರಿಯನ್ನು ವೀಕ್ಷಣೆ ಮಾಡಿದರು. ಸಣ್ಣಪುಟ್ಟ ಕಾಮಗಾರಿಯನ್ನು ಆದ–ಷ್ಟು ಬೇಗ ಪೂರ್ಣಗೊಳಿಸಿ , ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಬೇಕು. ನಂತರ ಕುರ್ವಕಲಾ ಬ್ರಿಜ್ ಗೆ ಭೇಟಿ, ಮಾತನಾಡಿ, ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಐಲ್ಯಾಂಡ್ ಗಳನ್ನು ಬರುತ್ತವೆ. ಮಳೆ ಬಂದಂತಹ ಸಮಯದಲ್ಲಿ ರೈತರ ಬೆಳೆಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತರಲು ಕಷ್ಟವಾಗಿತ್ತು. ಈ ಭಾಗದಲ್ಲಿ ಎರಡು ಬ್ರಿಜ್ ಗಳನ್ನು ನಿರ್ಮಿಸಲಾಗಿದೆ. ನಾರಾದ ಗಡ್ಡೆ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಹಾಗೂ ತೆಲಂಗಾಣ ರಾಜ್ಯದಿಂದ ಸಾವಿರಾರು ಜನರು ದರ್ಶನಕ್ಕೆ ಬರುವ ಕಾರಣ ನಾರಾದ ಗಡ್ಡೆಯನ್ನು ಪ್ರವಾಸ ತಾಣವಾಗಿ ಮಾಡಲು ಜಿಲ್ಲಾಡಳಿತದೊಂದಿಗೆ ಅಗತ್ಯ ಕ್ರಮ ವಹಿಸಲಾಗಿದೆ.

ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಒಟ್ಟು ಮೂರು ಐರ್ಲೆಂಡ್ ಗಳು ಇವೆ. ಈ ಭಾಗದಲ್ಲಿ ಮೊಸಳೆ ಪಾಕ್ 9 ನಿರ್ಮಿಸಲು ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುತ್ತದೆ. ಅಲ್ಲದೆ ಪ್ರಸಾದ್ ಕ್ರಮ ಮಾಡಲಾಗು. ಮುಂದಿನ ದಿನಗಳಲ್ಲಿ ರಾಯಚೂರು ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸೋದ್ಯಮ ತಾಣಗಳು ನಿರ್ಮಾಣವಾಗಲಿವೆ. ರೈತರ ಅನುಕೂಲವಾಗುವಂತೆ ಕೃಷ್ಣ ನದಿಗೆ ಸಣ್ಣ ಸ್ಣಯ ಡ್ಯಾಂ ನಿರ್ಮಿಸಿ ರೈತರಿಗೆ ಕೃಷಿ ಚಟುವಟಿ–ಕೆಗೆ ಅನುಕೂಲ ಮಾಡಿಕೊಡಲಾಗುತ್ತದೆ ಎಂದರು.

ಮಳೆ ಬರದೆ ಇದ್ದಲ್ಲಿ ರಾಜ್ಯ ಸರ್ಕಾರವು ಬರ ಪರಿಹಾರ ಘೋಷಣೆ ಮಾಡಲಾಗುತ್ತದೆ. ಎಲ್ಲಾ ರೈತರು ಬೆಳೆ ವಿಮೆಯನ್ನು ಮಾಡಿಸಿಕೊಳ್ಳಬೇಕು. ಬೆಳೆ ನಷ್ಟವಾದಲ್ಲಿ ವಿಮಾ ಕಂಪನಿಯಿಂದ ಪರಿಹಾರ ನೀಡಲಾಗುತ್ತದೆ. ಅದರಿಂದ ಪ್ರತಿಯೊಬ್ಬ ರೈತರು ಬೆಳೆ ವಿಮೆಯ ಸೌಲಭ್ಯವನ್ನು ಪಡೆಯಬೇಕು ಎಂದರು. ನಂತರ ನಾರಾದ ಗಡ್ಡೆಗೆ ಭೇಟಿ, ನಾರಾದ ಸ್ವಾಮಿ ಮೂಲ ಸ್ಥಳಕ್ಕೆ ಭೇಟಿ ದರ್ಶನ ಪಡೆದರು. ನಂತರ ಕೃಷ್ಣ ನದಿಯ ಸ್ನಾನಘಟ್ಟದ ಕಾಮಗಾರಿಯನ್ನು ಪರಿಶೀಲನೆ ಮಾಡಿದರು. ಇದೇ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜಿಲ್ಲಾಮಟ್ಟದ ಸಮಿತಿಯ ಉಪಾಧ್ಯಕ್ಷರಾದ ನಾಗೇಂದ್ರ ಮಟಮಾರಿ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಜಿ.ಸುರೇಶ್, ಪಿಡ್ಲೂಡಿ ಇಲಾಖೆಯ ಇಇ ಆನಂದ, ಮಹೇಶ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ದೀಪಾ ಕುಲಕರ್ಣಿ ಸೇ–ರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಮುಖಂಡರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### BDes (Bachelor of Design)

BDes (Bachelor of Design) ಎನ್ನುವುದು 4 ವರ್ಷಗಳ ಪದವಿ ಕೋರ್ಸ್ ಆಗಿದೆ. ಸೃಜನಶೀಲತೆ (Creativity) ಮತ್ತು ಕಲಾತ್ಮಕ ಕೌಶಲ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಇದು ಅತ್ಯುತ್ತಮ ಕೋರ್ಸ್ ಆಗಿದ್ದು, ಫ್ಯಾಷನ್, ಗ್ರಾಫಿಕ್, ಇಂಟೀರಿಯರ್ ಮುಂತಾದ ವಿಭಾಗಗಳಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ.ಕೋವಿಡ್ ನಂತರದ ದಿನಗಳಲ್ಲಿ ವಿನ್ಯಾಸ (Design) ಕ್ಷೇತ್ರಕ್ಕೆ ಹೆಚ್ಚಿನ ಬೇಡಿಕೆ ಬಂದಿದ್ದು, ಕರಾವಳಿ ಮತ್ತು ರಾಜ್ಯದಾದ್ಯಂತ ಉತ್ತಮ ಅವಕಾಶಗಳು ಲಭ್ಯವಿವೆ.ಪ್ರಮುಖ ವಿವರಗಳು (Course Details):ಅರ್ಹತೆ (Eligibility): ಯಾವುದೇ ವಿಷಯದಲ್ಲಿ (ವಿಜ್ಞಾನ, ವಾಣಿಜ್ಯ ಅಥವಾ ಕಲೆ) ಪಿಯುಸಿ ಅಥವಾ 10+2 ಪಾಸಾಗಿರಬೇಕು. ಕನಿಷ್ಠ ಶೇಕಡಾ 50% ಅಂಕಗಳನ್ನು ಪಡೆದಿರಬೇಕು.ಕೋಲಾವಧಿ (Duration): 4 ವರ್ಷಗಳು (8 ಸೆಮಿಸ್ಟರ್‌ಗಳು).ಪ್ರವೇಶ ಪರೀಕ್ಷೆ (Entrance Exams): ರಾಷ್ಟ್ರಮಟ್ಟದ ಪರೀಕ್ಷೆಗಳಾದ ಗಅಇಇಆ, ಓಋಈಖ, ಓಋಆ ಆಂಖ ಮತ್ತು ಖಇಇಆ ಮೂಲಕ ಪ್ರವೇಶ ಪಡೆಯಬಹುದು.ವಿಭಾಗಗಳು (Specializations):ಈ ಕೋರ್ಸ್‌ನಲ್ಲಿ ನೀವು ನಿಮ್ಮ ಆಸಕ್ತಿಗೆ ತಕ್ಕಂತೆ ಅನೇಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು:ಫ್ಯಾಷನ್ ಡಿಸೈನ್ (Fashion Design): ಬಟ್ಟೆ ಮತ್ತು ಉಡುಪುಗಳ ವಿನ್ಯಾಸ.ಇಂಟೀರಿಯರ್ ಡಿಸೈನ್ (Interior Design): ಮನೆ ಮತ್ತು ಕಚೇರಿಗಳ ಒಳಾಂಗಣ ವಿನ್ಯಾಸ.ಗ್ರಾಫಿಕ್ ಡಿಸೈನ್ (Graphic Design): ಡಿಜಿಟಲ್ ಪೋಸ್ಟರ್‌ಗಳು, ಲೋಗೋಗಳು ಮತ್ತು ಬ್ರ್ಯಾಂಡಿಂಗ್.UI/UX ಡಿಸೈನ್: ಮೊಬೈಲ್ ಆಪ್‌ಗಳು ಮತ್ತು ವೆಬ್‌ಸೈಟ್‌ಗಳ ವಿನ್ಯಾಸ.ಉತ್ಪನ್ನ ವಿನ್ಯಾಸ (Product Design): ದೈನಂದಿನ ವಸ್ತುಗಳ ವಿನ್ಯಾಸ.ಉದ್ಯೋಗಾವಕಾಶಗಳು (Career Opportunities):ಈ ಪದವಿಯ ನಂತರ ನೀವು ಡಿಸೈನರ್, ಆರ್ಟ್ ಡೈರೆಕ್ಟರ್, ಅಥವಾ ಫ್ರೀಲ್ಯಾನ್ಸರ್ ಆಗಿ ಕೆಲಸ ಮಾಡಬಹುದು. ಮಾಸಿಕ ಆದಾಯವು ಸಾಮಾನ್ಯವಾಗಿ ?30,000 ರಿಂದ ?1,00,000 ವರೆಗೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಥವಾ ಕಾಲೇಜುಗಳ ಪ್ರವೇಶ ಪ್ರಕ್ರಿಯೆಗಳನ್ನು ಪರಿಶೀಲಿಸಲು Shiksha.com BDes Page ಅಥವಾ Careers360 BDes Page ಗೆ ಭೇಟಿ ನೀಡಿ.

## ಒಂದೇ ಸ್ಥಳದಲ್ಲಿ ಠಿಕಾಣಿಯೂರಿ S I R ಪ್ರಕ್ರಿಯೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದ ವಾರ್ಡ್ ನಂಬರ್ 4 ರ ಹಾಗೂ ಬೂತ್ ನಂಬರ್ 180 ರಲ್ಲಿ SIR ಪ್ರಕ್ರಿಯೆ ಲೋಪ , ಸಿ ಎಂ ಡಿಕೆಶಿ ಆದೇಶಕ್ಕೂ BLO ಡೋಂಟ್ ಕೇರ್, ಇತ್ತಕಡೆ ತಲೆ ಹಾಕದ ಅಧಿಕಾರಿಗಳು ವಾರ್ಡ್ ನಂಬರ್ 4 ರ ವಿಜಯ ಮಹಾಂತೇಶ್ವರ ಮಠದ ಹಿಂಬದಿಯ ಮನೆಯ ಕಟ್ಟೆಯೊಂದರಲ್ಲಿಯೇ ಠಿಕಾಣಿಯೂರಿ ( ಕುಳಿತು ) ಮತ ಪಟ್ಟಿ ಪರಿಸ್ಕರಣೆ SIR ಪ್ರಕ್ರಿಯೆ ನಡೆಸುತ್ತಿರುವ BLO ಹಾಗೂ BLO ಸಹಾಯಕಿ ಮಠದ ಕಟ್ಟೆ , ಅಂಗನವಾಡಿ ಹಾಗೂ ಖಾಲಿ ಮನೆಗಳ ಕಟ್ಟೆಯಲ್ಲಿಯೇ ಮತಪಟ್ಟಿ ಪರಿಷ್ಕರಣೆ ಪಟ್ಟಣದ ಕೆಲವು ವಾರ್ಡ್ ಗಳಲ್ಲಿ ಕಂಟ್ರೋಲ್ ತಪ್ಪಿದ SIR ಪ್ರಕ್ರಿಯೆ ಪಟ್ಟಣದಲ್ಲಿ ಬೇಕಾಬಿಟ್ಟಿ SIR ಪ್ರಕ್ರಿಯೆ ನಡೆಯುತ್ತಿದ್ದು ನಿಯಮದ ಪ್ರಕಾರ ಮನೆ ಮನೆಗೆ ಭೇಟಿ ನೀಡಿ , ಮತದಾರರಿಗೆ ಸರಿಯಾದ ಮಾಹಿತಿ ಕೊಟ್ಟು , ಪರಿಸ್ಕರಣೆ ಮಾಡುವುದೇ SIR ಪ್ರಕ್ರಿಯೆಯ ನಿಯಮ, ಈ ಎಲ್ಲ ನಿಯಮವನ್ನು ಗಾಳಿಗೆ ತೂರಿ ತಮ್ಮ ಮನಸೋ ಇಚ್ಛೆ SIR ಪ್ರಕ್ರಿಯೇ ನಡೆಸುತ್ತಿರುವ BLO ಹಾಗೂ BLO ಸಹಾಯಕಿ . ಪ್ರಶ್ನೆಸಿದವರ ಮನೆಯ SIR ಪರಿಸ್ಕರಣೆ ವಿಳಂಬ , ಇನ್ನು ಹೆಚ್ಚಿನದನ್ನು ಪ್ರಶ್ನೆಸಿದರೆ ನಿಮ್ಮ ಮತ ಪಟ್ಟಿ ನಮ್ಮಲ್ಲಿಲ್ಲ... ನೀವೇ ಹುಡುಕಿ ಕೊಡಿ ಎನ್ನುವ ಹಾರಿಕೆಯ ಉತ್ತರ ನೀಡುತ್ತಾರೆಂದು ನೊಂದ ಮತ ಪಟ್ಟಿ ಪರಿಸ್ಕರಣೆಗೆ ಬಂದ ವ್ಯಕ್ತಿಯ ಮಾತಾಗಿದೆ . SIR ಪ್ರಕ್ರಿಯೆ ಸಂಪೂರ್ಣ ಹದಗೆಟ್ಟಿದೆ, ತಮ್ಮ ಮನಸೋ ಇಚ್ಛೆ ನಡೆಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಇವರ ವಿರುದ್ಧ ಸರಿಯಾದ ಕ್ರಮ ಜರುಗಿಸುವರೇ ಎಂದು ಕಾದು ನೋಡೋಣ...?



ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ಅವರಿಂದ ಪೋಸ್ಟರ್ ಬಿಡುಗಡೆ

ನೈಜ್ಯ ದೆಸೆ ನ್ಯೂಸ್



ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ರಾಯಚೂರು ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಜುಲೈ 03ರ ಶುಕ್ರವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕೃಷಿ ಇಲಾಖೆಯ ವತಿಯಿಂದ ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ಪ್ರಧಾನ ಮಂತ್ರಿ ಫಸಲ ಬಿಮಾ (ವಿಮೆ) ಯೋಜನೆಯ ಹಾಗೂ ವಿವಿಧ ರಸಗೊಬ್ಬರ ದರಗಳ ಪಟ್ಟಿ ಕುರಿತು ಪೋಸ್ಟರ್ ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್ ಚೌವಾಣ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಕೃಷಿ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

## ದೇಶದ ಆರ್ಥಿಕತೆಗೆ ಸಹಕಾರ ಕ್ಷೇತ್ರದ ಕೊಡುಗೆ ಅಪಾರ:ಪಾಟೀಲ ( ಕನಮಡಿ )

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 05 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ, ದಿನಾಂಕ 03.07.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ ಹಾಗೂ ತಾಳಿಕೋಟಿ ತಾಲ್ಲೂಕ ಸಹಕಾರಿಗಳು ಸಹಯೋಗದೊಂದಿಗೆ "ಸಹಕಾರ ಜಾಗೃತಿ ಸಭೆ" ಕಾರ್ಯಕ್ರಮವನ್ನು ವೀರಶೈವ ವಿದ್ಯಾವರ್ಧಕ ಸಂಘ ಎಸ್.ಕೆ.ಬಿಎಡ್. ಕಾಲೇಜ್ ತಾಳಿಕೋಟಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯ ನುಡಿಗಳನ್ನು ವಿ. ಸಿ ಹಿರೇಮಠ, ಅಧ್ಯಕ್ಷರು ವೀರಶೈವ ವಿದ್ಯಾವರ್ಧಕ ಸಂಘ ತಾಳಿಕೋಟಿ ಇವರು ನೀಡಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಸಂಜಯ ಪಾಟೀಲ ( ಕನಮಡಿ ) ಇವರು ವಹಿಸಿ ಸಹಕಾರ ಕ್ಷೇತ್ರ ನಡೆದು ಬಂದ ದಾರಿ ಸಹಕಾರ ಸಚಿವಾಲಯ ಸ್ಥಾಪನೆ ನಂತರ ದೇಶದಲ್ಲಿ ಆದ ಪ್ರಗತಿ ಕುರಿತು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ, ಇದರ ಉಪಾಧ್ಯಕ್ಷರಾದ ಚಂದ್ರಶೇಖರ ಕವಟಗಿ ಇವರು ಪ್ರಸ್ತಾವಿಕವಾಗಿ ಮಾತನಾಡಿದರು , ಹಾಗೂ ಒಕ್ಕೂಟದ ನಿರ್ದೇಶಕರುಗಳಾದ ಸಿದ್ದು ಮಲ್ಲಿಕಾರ್ಜುನ ಮಠ, ಯಮನಪ್ಪ ಸಾತಿಹಾಳ , ಅರುಣ ಆರ್. ವಾರದ, ವಿವೇಕಾನಂದ ಶಿರೋಳಕರ , ಮುಖ್ಯ ಕಾರ್ಯನಿರ್ವಾಹಕರಾದ ಪಂಪನಗೌಡ ಪಾಟೀಲ ಉಪಸ್ಥಿತರಿದ್ದರು. ಸಹಕಾರಿ ಜಾಗೃತ ಸಭೆಯನ್ನು ವೀರಶೈವ ವಿದ್ಯಾವರ್ಧಕ ಸಂಘದ ಬಿಎಡ್ ವಿದ್ಯಾರ್ಥಿಗಳಿಗೆ ಆಯೋಜನೆ ಮಾಡಲಾಗಿತ್ತು, ಸಭೆಯಲ್ಲಿ ಸಹಕಾರಿಗಳಾದ ಕಾಶಿನಾಥ ಮುರಾಳ, ಕಿಶನ್ ಲೋಖರೆ, ವಾಸುದೇವ ಹೆಬಸೂರ,ಸಂಜು ಹಂಚಾಟೆ , ಶಂಕರಗೌಡ ಪಾಟೀಲ, ದ್ಯಾಮನಗೌಡ ಪಾಟೀಲ ಮಿಣಜಗಿ , ಬಾಬುಸಿಂಗ್ ಹಜೇರಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಟ್ಟಿ, ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯ ಸದಸ್ಯರು , ತಾಲ್ಲೂಕಿನ ಸ್ಥಳೀಯ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿವಾಹಕರು ಉಪಸ್ಥಿತರಿದ್ದರು.

## ಸದ್ಯದಲ್ಲೇ ಮೋದಿ ಸಂಪುಟ ಪುನರ್ ರಚನೆ : ಅಮಿತ್ ಶಾಗೆ ಉಪ ಪ್ರಧಾನಿ ಪಟ್ಟ? ವರದಿಗಳು

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಸದ್ಯದಲ್ಲೇ ಕೇಂದ್ರ ಸಚಿವ ಸಂಪುಟ ಪುನರ್ ರಚನೆಯಾಗಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪ ಪ್ರಧಾನಿಯಾಗಲಿದ್ದಾರೆ ಎಂದು ವರದಿಯೊಂದು ತಿಳಿಸಿದೆ.

ಮುಂಗಾರು ಅಧಿವೇಶನಕ್ಕೂ ಮುನ್ನ ಅಂದರೆ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಗಮನದಲ್ಲಿಟ್ಟುಕೊಂಡು ಸಚಿವ ಸಂಪುಟ ಪುನರ್ ರಚನೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.



ಸಚಿವ ಸಂಪುಟ ಪುನರ್ ರಚನೆ ಪ್ರಕ್ರಿಯೆಯಲ್ಲಿ 'ಆಪರೇಷನ್ ಟೈಗರ್ ' ಯಶಸ್ಸಿನ ಹಿಂದಿನ ನಾಯಕನಿಗೆ ಪದೋನ್ನತಿ ನೀಡುವ ನಿರೀಕ್ಷೆಯಿದೆ ಎಂದು ಮರಾಠಿ ಮಾಧ್ಯಮ ವರದಿ ಮಾಡಿದೆ.

ಕೇಂದ್ರ ಸಚಿವ ಸಂಪುಟ ಪುನಾರಚನೆ: ಎನ್ ಸಿಪಿ ನಾಯಕ ಪ್ರಫುಲ್ ಪಟೇಲ್ ಗೆ ಕೇಂದ್ರ ಸಚಿವ ಸ್ಥಾನ : ಎನ್ ಡಿಎ ಸರ್ಕಾರದಲ್ಲಿ ಶಿವಸೇನಾ ಶಿಂಧೆ ಬಣದ ಬಲವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಶ್ರೀಕಾಂತ್ ಶಿಂಧೆ, ಓಂರಾಜೆ ನಿಂಬಾಳ್ಕರ್ ಮತ್ತು ಸಂಜಯ್ ಬಂದು ಜಾಧವ್ ಅವರಿಗೆ ಸಂಪುಟದಲ್ಲಿ ಸ್ಥಾನ ದೊರೆಯಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಪುತ್ರನಾಗಿರುವ ಶ್ರೀಕಾಂತ್ ಶಿಂಧೆ ಆಪರೇಷನ್ ಟೈಗರ್ ಹಿಂದಿನ ಮಾಸ್ಟರ್ ಮೈಂಡ್ ಎನ್ನಲಾಗುತ್ತಿದೆ. ಈ ಕಾರ್ಯಾಚರಣೆಯಲ್ಲಿ ಏಳು ಸಂಸದರು ಉದ್ಧವ್ ಠಾಕ್ರೆ ಬಣ ತೊರೆದು ಎನ್ ಡಿಎ ಮೈತ್ರಿ ಪಕ್ಷವಾದ ಏಕನಾಥ್ ಶಿಂಧೆ ನೇತೃತ್ವದ ಶಿವಸೇನಾಗೆ ಇತ್ತೀಚಿಗೆ ಸೇರ್ಪಡೆಯಾದರು.

# ಸಮಾಜಕ್ಕಾಗಿ ಬದುಕು ವರಾ ಗೋಣ :ಡಾ.ಅನೀಲ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ನಾವು ನಮಗಾಗಿ ಬದುಕುವುದು ಮುಖ್ಯವಲ್ಲ, ನಾವು ಸಮಾಜಕ್ಕಾಗಿ ಬದುಕುವವರಾಗಬೇಕು. ಪರೋಪಕಾರ ನಮ್ಮೆಲ್ಲರ ಬದುಕಿನ ಗುರಿಯಾಗಲಿ ಎಂದು ಬೆಳಗಾವಿ ಲೋಟಸ್ ಆಸ್ಪತ್ರೆಯ ಎಲುಬು ಕೀಲುಗಳ ತಜ್ಞ ಡಾ.ಅನೀಲ ಬ.ಪಾಟೀಲ(ಲಿಂಗದಳ್ಳಿ) ಹೇಳಿದರು.**

ತಾಲೂಕಿನ ಲಿಂಗದಳ್ಳಿ ಗ್ರಾಮದ ಬಿ ಆರ್ ಪಾಟೀಲ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ದಿ.ಬಾಪುಗೌಡ ರಾಮನಗೌಡ ಪಾಟೀಲ ಅವರ 8ನೇ ಪುಣ್ಯ ಸ್ಮರಣೋತ್ಸವ ನಿಮಿತ್ಯ ಲೋಟಸ್ ಆಸ್ಪತ್ರೆ ಬೆಳಗಾವಿ ಅನುಗ್ರಹ ಕಣ್ಣಿನ ಆಸ್ಪತ್ರೆ ವಿಜಯಪುರ ಕರೆಕಲ್ ಆಸ್ಪತ್ರೆ ಮದ್ದೇಬಿಹಾಳ ಹಾಗೂ ಲಿಂಗದಳ್ಳಿ ಗ್ರಾಮಸ್ಥರ ಸಹಯೋಗದಲ್ಲಿ ಹಮ್ಮಿಕೊಂಡ ಉಚಿತ ಕಣ್ಣಿನ ಹಾಗೂ ಎಲುಬು ಮತ್ತು ಕೀಲು ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ತಂದೆಯವರಾದ ದಿ.ಬಿ ಆರ್ ಪಾಟೀಲರ ಬದುಕಿನ ಆದರ್ಶಗಳೇ ನಮಗೆ ಪ್ರೇರಣೆಯಾಗಿವೆ. ಅವರು ನಮಗೆ ಕೇವಲ ಸಂಪತ್ತು ಬಿಟ್ಟು ಹೋಗಲಿಲ್ಲ ಒಳ್ಳೆಯ ಶಿಕ್ಷಣ ಸಂಸ್ಕಾರ ಕೊಟ್ಟು ಹೋದರು. ಅವರು ತೋರಿದ ಮಾರ್ಗದಲ್ಲಿ ನಾವು ಸಹ ನಡೆದು ಒಳ್ಳೆಯ ಕಾರ್ಯಗಳನ್ನು ಮಾಡಲು ಪ್ರಯತ್ನಿಸುತ್ತಿದ್ದೇವೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು.



ಅನುಗ್ರಹ ಕಣ್ಣಿನ ಆಸ್ಪತ್ರೆ ನೇತ್ರಾಧಿಕಾರಿ ದತ್ತಾತ್ರೇಯ ಹೊಸಮಠ ಮಾತನಾಡಿ ದಿ.ಬಿ.ಆರ್.ಪಾಟೀಲರಂತೆ ಅವರ ಕುಟುಂಬದ ಸದಸ್ಯರೂ ತಮ್ಮನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವತ್ತು ಅವರ ಸ್ಮರಣೆಗಾಗಿ ಈ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಂಡಿದ್ದಾರೆ ಇದರ ಸದುಪಯೋಗನ್ನು ತಾವೆಲ್ಲರೂ ಮಾಡಿಕೊಳ್ಳಬೇಕು ಎಂದರು.

ಮುಖ್ಯ ಶಿಕ್ಷಕಿ ಆರ್ ಬಿ ದೇಸಾಯಿ ಮಾತನಾಡಿ ದಿ.ಬಿ.ಆರ್.ಪಾಟೀಲರು ಶಿಕ್ಷಣ ಪ್ರೇಮಿಗಳಾಗಿದ್ದರು.ಅವರು ಈ ಶಾಲೆಗೆ 3 ಎಕರೆ ಬೆಲೆಬಾಳುವ ಜಮೀನು ದಾನ ಮಾಡಿರುವುದರಿಂದ ಕಳೆದ 25 ವರ್ಷಗಳಿಂದ ಈ ಶಾಲೆ ಸಾವಿರಾರು ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದೆ. ಅವರ ಕುಟುಂಬದ ಸದಸ್ಯರಿಗೆ ನಾವು ಸದಾ ಚಿರಋಣಿಯಾಗಿದ್ದೇವೆ ಎಂದರು. ಶಿಕ್ಷಕ ಎ.ಎಂ. ಮೂಲಿಮನಿ ಪ್ರಸ್ತಾವಿಕವಾಗಿ ಮಾತನಾಡಿದರು. ಬಸನಗೌಡ ಪಾಟೀಲ ಲಿಂಗದಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ, ವೇದಮೂರ್ತಿ ಬಸಯ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ 2025-26 ನೇ ಸಾಲಿನಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ಶ್ರೀ ಬಿ.ಆರ್. ಪಾಟೀಲ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಾದ ಭಾಗ್ಯಶ್ರೀ ಪಾಟೀಲ ಹಾಗೂ ಅಂಜಲಿ ಬಿರಾದಾರ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ನಂತರ ನಡೆದ ಆರೋಗ್ಯ ಶಿಬಿರದಲ್ಲಿ 160ಜನರು ನೇತ್ರ ತಪಾಸಣೆಗೆ ಒಳಗಾದರು ಇವರಲ್ಲಿ 40 ಜನರನ್ನು ಶಸ್ತ್ರಚಿಕಿತ್ಸೆಗಾಗಿ ಆಯ್ಕೆ ಮಾಡಲಾಯಿತು.120 ಜನರು ಎಲುಬು ಮತ್ತು ಕೀಲು ತಪಾಸಣೆ ಮಾಡಿಸಿಕೊಂಡರೆ, ಸುಮಾರು 70 ಜನರು ಹೃದಯ ಹಾಗೂ ವಿವಿಧ ರೋಗಕ್ಕೆ ಸಂಬಂಧಿಸಿ ತಪಾಸಣೆ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಶಿವನಗೌಡ ಪಾಟೀಲ,ಬಸನಗೌಡ ಮೇಟಿ, ಮಲ್ಲನಗೌಡ ಬಿರಾದಾರ, ಅರವಿಂದ ಪಾಟೀಲ ಲಿಂಗದಳ್ಳಿ, ಅಯ್ಯನಗೌಡ ನಾಡಗೌಡ, ಬಸನಗೌಡ ಬಸರಕೋಡ, ಮುತ್ತು ಯಾಳವಾರ ಚಬನೂರ, ಕಾಶೀರಾಯಗೌಡ ಬಿರಾದಾರ,-ಎಸ್.ಎಂ.ಕರೆಕಲ್, ಮಶಾಕಸಾಬ ಚಬನೂರ, ಸುನಂದಾ ಪಾಟೀಲ, ಗೌರಮ್ಮ ಪಾಟೀಲ,ಡಾ. ಸಂತೋಷ್ ಪಾಟೀಲ,ಡಾ.ಬಸನಗೌಡ ಪಾಟೀಲ ಕರೆಕಲ್,ಡಾ.ಭರತಗೌಡ ಪಾಟೀಲ,ಡಾ.ಅತ್ರೇಶ ಪಾಟೀಲ, ವಿರೇಶಗೌಡ ನಾಡಗೌಡ ಬಿಂಜಲಭಾವಿ, ಶಾಂತಗೌಡ ಕವಲಗಿ, ಶಿವನಗೌಡ ಪಾಟೀಲ, ಮಲ್ಲನಗೌಡ ಬಿರಾದಾರ, ಮಹಂತಗೌಡ ಪಾಟೀಲ, ಬಸನಗೌಡ ಪಾಟೀಲ, ಶಿಕ್ಷಕ ವರ್ಗ, ವೈದ್ಯಕೀಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಇದ್ದರು. ಕುಮಾರಿ ಸವಿತಾ ಸಂಗಡಿಗರು ಪ್ರಾರ್ಥಿಸಿದರು.ಶಿಕ್ಷಕ ವೈ.ಬಿ.ಬಡಿಗೇರ ಸ್ವಾಗತಿಸಿದರು. ಶಿಕ್ಷಕಿ ಎನ್.ಎಂ. ಅಮಲ್ಯಾಳ ಹಾಗೂ ಶಿಕ್ಷಕ ಜೆ.ಎಸ್.ಸಂಗಮ ನಿರೂಪಿಸಿದರು. ಸಹ ಶಿಕ್ಷಕ ಎ.ಎ. ಹಡಲಗೇರಿ ವಂದಿಸಿದರು.

## ಜುಲೈ 10ರಂದು ರಾಯಚೂರು ತಾಲೂಕಿನಲ್ಲಿ ಜಪ್ತಿ ಮಾಡಲಾದ ಆಹಾರ ಧಾನ್ಯಗಳ ಬಹಿರಂಗ ಹರಾಜು ಪ್ರಕ್ರಿಯೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 04 (ಕರ್ನಾಟಕ ವಾರ್ತೆ): ಜಿಲ್ಲೆಯ ರಾಯಚೂರು ತಾಲೂಕು ಆಹಾರ ಇಲಾಖೆಯಿಂದ ಸಗಟು ಗೋದಾಮುಗಳಲ್ಲಿ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ 780.33 ಕ್ವಿಂಟಾಲ್ ಅಕ್ಕಿ ಹಾಗೂ 1.60 ಕ್ವಿಂಟಾಲ್ ಜೋಳದ ಆಹಾರ ಧಾನ್ಯಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಜುಲೈ 10ರ ಬೆಳಿಗ್ಗೆ 12ಗಂಟೆಗೆ ರಾಯಚೂರಿನ ಶಕ್ತಿನಗರ ರಸ್ತೆಯ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಕಾಟನ್ ಮಾರ್ಕೆಟ್ ಸಗಟು ಮಾರಾಟ ಮಳಿಗೆಯಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದಾಗಿದೆ ರಾಯಚೂರು ತಹಶೀಲ್ದಾರರಾದ ಸುರೇಶ ವರ್ಮಾ ಅವರು ತಿಳಿಸಿದ್ದಾರೆ.**




ಬಹಿರಂಗ ಹರಾಜು ಷರತ್ತುಗಳು: ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಎಪಿಎಂಸಿ ಪರವಾನಿಗೆದಾರರು ಅಥವಾ ಪರವಾನಿಗೆ ಪಡೆದ ಸಗಟು ಅಥವಾ ಚಿಲ್ಲರೆ ವ್ಯಾಪಾರಿಗಳು, ಕಮಿಷನ್ ಏಜೆಂಟರ್, ಅಕ್ಕಿ ಗಿರಣಿ ಮಾಲೀಕರು ಹಾಗೂ ದೊಡ್ಡ ಪ್ರಮಾಣದಾರ ಬಳಕೆದಾರ ಸಂಸ್ಥೆಗಳು ಆಗಿರಬೇಕು. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಬಹಿರಂಗ ಹರಾಜು ದಿನ ಪೂರ್ವಾಹ್ನ 10ಗಂಟೆಯೊಳಗಾಗಿ ಹರಾಜು ಸ್ಥಳದಲ್ಲಿ ಹಾಜರಾಗಿ ಹೆಸರನ್ನು ನೋಂದಾಯಿಸಿಕೊಳ್ಳುವುದು ಹಾಗೂ 20,000 ರೂ.ಗಳನ್ನು (ಇಪತ್ತು ಸಾವಿರ ರೂಗಳ) ಇ.ಎಂ.ಡಿ ಮೊತ್ತವನ್ನು ಮುಂಗಡವಾಗಿ ಪಾವತಿಸಬೇಕು.

ಇ.ಎಂ.ಡಿ ಮೊತ್ತವನ್ನು ಜಿಲ್ಲಾಧಿಕಾರಿಗಳು ರಾಯಚೂರು ಅವರ ಹೆಸರಿನಲ್ಲಿ ಡಿಡಿ ಮೂಲಕ ಪಾವತಿಸತಕ್ಕದ್ದು. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಎರಡು ಪಾಸ್ ಪೋರ್ಟ್ ಸೈಜ್ ಭಾವಚಿತ್ರ, ಪರವಾನಿಗೆ ತಮ್ಮ ವ್ಯಾಪಾರಿ ನೋಂದಣಿ ಪತ್ರ ಅಥವಾ ಸಂಸ್ಥೆ ನೋಂದಣಿ ಪತ್ರ, ಆಧಾರ್ ಕಾರ್ಡಿನ ಪ್ರತಿಯನ್ನು ಹಾಜರುಪಡಿಸಿ ಹರಾಜಿನಲ್ಲಿ ಭಾಗವಹಿಸುವುದು. ಹರಾಜು ಮುಗಿದ ನಂತರ ಠೇವಣಿ ಮೊತ್ತವನ್ನು ಗರಿಷ್ಠ ಹಾಗೂ ಎರಡನೇ ಗರಿಷ್ಠ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು. ಗರಿಷ್ಠ ಬಿಡ್ಡುದಾರರು ನಿಗದಿತ ಅವದಿಯೊಳಗೆ ಪೂರ್ಣ ಹಣವನ್ನು ಪಾವತಿಸಲು ವಿಫಲವಾದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ನಂತರ ಎರಡನೇ ಬಿಡ್ಡುದಾರರಿಗೆ ಅವಕಾಶ ಮಾಡಿಕೊಡಲಾಗುವುದು ಇವರಿಗೆ ಸಹ ಇದೇ ನಿಯಮ ಅನ್ವಯವಾಗುತ್ತದೆ.

ಅಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ ಪ್ರಕರಣಕ್ಕೆ ಒಳಗಾಗಿರುವ ವ್ಯಕ್ತಿ, ಸಂಸ್ಥೆಗಳು, ವ್ಯಾಪಾರಿಗಳು, ಸಾರ್ವಜನಿಕ ವಿತರಣಾ ಪದ್ಧತಿ ವ್ಯವಸ್ಥೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಜಪ್ತಿ ಮಾಡಲಾದ ಆಹಾರ ಧಾನ್ಯಗಳನ್ನು ಎಲ್ಲಿದೆಯೋ ಅಲ್ಲಿ ಹಾಗೂ ಹೇಗಿವೆಯೋ ಹಾಗೆ ಷರತ್ತಿನಡಿ ಹರಾಜು ಮಾಡಲಾಗುತ್ತಿರುವುದರಿಂದ ಹರಾಜಿನಲ್ಲಿ ಭಾಗವಹಿಸುವವರು ಅದಕ್ಕೂ ಮುನ್ನ ಸಗಟು ಮಾರಾಟ ಮಳಿಗೆ 12ಗಂಟೆಗೆಯೊಳಗೆ ಭೇಟಿ ನೀಡಿ ಆಹಾರ ಧಾನ್ಯಗಳ ಗುಣಮಟ್ಟವನ್ನು ಪರಿಶೀಲನೆ ಮಾಡತಕ್ಕದ್ದು. ಬಹಿರಂಗ ಹರಾಜಿನಲ್ಲಿ ಬರುವ ಸ್ಪರ್ಧಾತ್ಮಕ ದರಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಥವಾ ಈ ಹರಾಜವನ್ನು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ.

ಆಯಾ ತಾಲ್ಲೂಕಿನ ತಹಶೀಲ್ದಾರರು, ಆಹಾರ ಸಿಬ್ಬಂದಿಯವರು ಮತ್ತು ಗೋದಾಮು ವ್ಯವಸ್ಥಾಪಕರು, ಕೆ.ಎಫ್.ಸಿ.ಎಸ್.ಸಿ ಅವರ ಸಮಕ್ಷಮದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದು. ಬಿಡ್‌ನಲ್ಲಿ ನಮೂದಾಗುವ ದರಗಳನ್ನು ಜಿಲ್ಲಾಧಿಕಾರಿಗಳು ಅನುಮೋದಿಸಿದ ನಂತರ ಬಿಡ್‌ನ ಒಟ್ಟು ಮೌಲ್ಯವನ್ನು ಸರ್ಕಾರದ ಲೆಕ್ಕ ಶಿರ್ಷಿಕೆಗೆ ನಿಗದಿತ ದಿನಾಂಕದೊಳಗಾಗಿ ಜಮಾ ಮಾಡಿ ಚಲನದ ಹರಾಜುಪಡಿಸಿದ ನಂತರ ಹರಾಜಾದ ಪದಾಥ-ರ್ ಎತ್ತುವಳಿಗೆ ಅವಕಾಶ ನೀಡಲಾಗುವುದು. ಎಪಿಎಂಸಿ ಸೆಸ್ ಮತ್ತು ಇತರೆ ಯಾವುದಾದರೂ ಶುಲ್ಕವನ್ನು ಸರ್ಕಾರಕ್ಕೆ ಕಟ್ಟಬೇಕಾದಲ್ಲಿ ಹರಾಜಿನಲ್ಲಿ ಆಯ್ಕೆಯಾದ ಬಿಡ್‌ದಾರರ ಪಾವತಿಸತಕ್ಕದ್ದು. ಬಹಿರಂಗ ಹರಾಜಾದ ಆಹಾರ ಧಾನ್ಯಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಆದೇಶ ನೀಡಿದ 3 ದಿನಗಳಲ್ಲಿ ತಾಲ್ಲೂಕಿನ ಸಗಟು ಗೋದಾಮುಗಳಿಂದ ಎತ್ತುವಳಿ ಮಾಡಬೇಕು. ಹೆಚ್ಚಿನ ಮಾಹಿತಿ ಅಥವಾ ಷರತ್ತುಗಳನ್ನು ಉಪ ನಿರ್ದೇಶಕರ ಕಚೇರಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರಾಯಚೂರು, ಅಥವಾ ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತದ ಜಿಲ್ಲಾ ವ್ಯವಸ್ಥಾಪಕರು ರಾಯಚೂರು ಅಥವಾ ರಾಯಚೂರು ತಹಶೀಲ್ದಾರರ ಕಚೇರಿಗಳಿಗೆ ಭೇಟಿ ನೀಡಿ ವಿವರಗಳನ್ನು ಪಡೆಯಬಹುದಾಗಿದೆ ಎಂದು ರಾಯಚೂರು ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101